
CENTRAL UNIVERSITY OF KARNATAKA





# Central Library

Central University of Karnataka, Kalaburgi

## Good Morning CUK !

# News Headings

Education

Science & Technology

Nutrition and Health

Business, Finance & Marketing

Economic News

Event and Celebration

Art & Architecture

Sports & Cultural

Editorial News


EDUCATION

# Need of increasing food production stressed

VIJAYAPURA, DHNS

Texas University Vegetable & Fruits Department Director Bhimu Patil stressed the need to double the food production to meet the requirement of the increasing population in the country.

Speaking after inaugurating a workshop on 'Agriculture a profession and lifestyle' organised at College of Agriculture here, he said that farming is the best sector which satiates hunger and this can be done only by agriculture scientists. "India is agriculture-based country. It is not enough to focus only on food production. It has become a challenge to produce nutritious food. Therefore, the students should choose this sector to provide food security to the nation," he advised.

University of Agricultural Sciences, Dharwad Vice-Chancellor P L Patil said that more students are opting for agriculture courses as they can earn good revenue by engaging in farming, horticulture, animal husbandry and honey farming. There are many graduation and PG courses in this sector. Six universities in the State are offering different types of courses in agriculture, he added.

Urban Development Commissioner Rajashekhar Dambal, Agriculture Department Joint Director William Rajashekhar and others were present.




Texas University Vegetable & Fruits Department Director Bhimu Patil inaugurates a workshop on 'Agriculture a profession and lifestyle' held at College of Agriculture in Vijayapura on Sunday. University of Agricultural Sciences, Dharwad Vice-Chancellor P L Patil, Urban Development Commissioner Rajashekhar Dambal and others are present.

DH PHOTO

# ಗಣಿತ ಅಧ್ಯಯನ ವ್ಯಕ್ತಿತ್ವ ವಿಕಸನಕ್ಕೆ ಪೂರಕ: ಚನ್ನನಗೌಡ

## ಮಣ್ಣೂರ ಗ್ರಾಮದ ಸರ್ಕಾರಿ ಶಾಲೆಯಲ್ಲಿ ರಾಮನುಜನ್ ಜನ್ಮದಿನ ನಿಮಿತ್ತ ಗಣಿತ ದಿನ ಆಚರಣೆ

• **ಕನ್ನಡಪ್ರಭ ವಾರ್ತೆ** ಅಫಜಲ್ಪುರ

ಗಣಿತ ಒಳಗೊಂಡಿರುವ ಲೆಕ್ಕಾಚಾರಗಳನ್ನು ಮಾಡುವುದರಿಂದ ತಾರ್ಕಿಕ ಶಕ್ತಿ, ಆಲೋಚನಾ ಸಾಮರ್ಥ್ಯ, ನೆನಪಿನ ಶಕ್ತಿ ಹೆಚ್ಚಾಗುತ್ತದೆ. ಇದೊಂದು ಕೇವಲ ವಿಷಯವಾಗಿರದೆ, ಜೀವನದ ಅಂಗವಾಗಿದೆ ಎಂದು ಗಣಿತ ಶಿಕ್ಷಕ ಚನ್ನನಗೌಡ ಮಾಲಿಪಾಟೀಲ ಹೇಳಿದರು.

ತಾಲೂಕಿನ ಮಣ್ಣೂರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಖ್ಯಾತ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮನುಜನ್‌ರ ಜನ್ಮದಿನವಾದ 'ರಾಷ್ಟ್ರೀಯ ಗಣಿತ ದಿನಾಚರಣೆ' ಕಾರ್ಯಕ್ರಮದಲ್ಲಿ ರಾಮಾನುಜನ್ ಭಾವಚಿತ್ರಕ್ಕೆ ಪೂಜೆಸಲ್ಲಿಸಿಮಾತನಾಡಿದಅವರು, ಲೆಕ್ಕಾಚಾರವಿಲ್ಲದ ಬದುಕು ಪರಿಪೂರ್ಣವಾಗಲಾರದು. ಗಣಿತದ ಅಧ್ಯಯನ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ಕಾರ್ಯಮಾಡುತ್ತದೆ. ಗಣಿತ ಜಗತ್ತಿಗೆ ಅನೇಕ ಸಿದ್ಧಾಂತಗಳು, ಕಲ್ಪನೆಗಳು, ಸೂತ್ರಗಳನ್ನು ನೀಡುವ ಮೂಲಕ ರಾಮಾನುಜನ್ ಅವರು ಗಣಿತಶಾಸ್ತ್ರ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ನೀಡಿರುವ ಕೊಡುಗೆ ಅವಿಸ್ಮರಣೀಯವಾಗಿದೆ ಎಂದು ಹೇಳಿದರು.

ಗಣಿತ ಶಿಕ್ಷಕಿ ಸುಮಲತಾ ಕುಂಬಾರ ಮಾತನಾಡಿ ಗಣಿತ ಶಾಸ್ತ್ರ ಎಲ್ಲಾ ಕ್ಷೇತ್ರಗಳಿಗೂ ಅವಶ್ಯಕವಾಗಿದೆ. ಇದು ಕಬ್ಬಿಣದ ಕಡಲೆಯಲ್ಲ. ತುಂಬಾ ಆಸಕ್ತಿಯಿಂದ ಅಧ್ಯಯನ ಮಾಡಿದರೆ ಸರಳವಾಗಿದೆ. ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಮೂಡಿರುವ ಭಯವನ್ನು ಶಿಕ್ಷಕರು ಮತ್ತು ಪಾಲಕರು ಹೋಗಲಾಡಿಸಬೇಕಾದದ್ದು ಅಗತ್ಯವಾಗಿದೆ. ವಿದ್ಯಾರ್ಥಿಗಳು ಗಣಿತದ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ರಾಷ್ಟ್ರೀಯ ಗಣಿತ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ರಂಗೋಲಿ ಸ್ಪರ್ಧೆಯಲ್ಲಿ ಗಣಿತ ಜ್ಯಾಮಿತಿಯ ವಿನ್ಯಾಸ, ಪ್ರಮೇಯ ರಚನೆ ಸೇರಿದಂತೆ ಗಣಿತದ ವಿಷಯಗಳ ಚಿತ್ರಗಳನ್ನು ರಂಗೋಲಿ ಮೂಲಕ ಬಿಡಿಸಿದ್ದರು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಸುರೇಶ ಕೋರಚಗಾಂವ, ಶಿಕ್ಷಕರಾದ ಶ್ರೀಶೈಲ ಸನದಿ, ಮರೆಪ್ಪ ಸಿಂದೆ, ಭಾಗೀರಥಿ ಬಿರಾದಾರ, ಶ್ರೀಶೈಲ ಭಾವಿಕಟ್ಟಿ, ಸುಮಲತಾ ಕುಂಬಾರ, ಶೈಲಾ ಎಚ್.ಎಸ್, ಸಂಗೀತಾ ಟಕ್ಕಳಕಿ, ನಾಗಯ್ಯ ಮಠ, ಅಂಬಿಕಾ ತೋಳನೂರ, ಕಲಾವತಿ ಕೊಳಲಗಿ, ಸಂಗೀತಾ ಹೋಟ್ಕರ, ಶೈಲಾ ಸೂಳಿಭಾವಿ, ದತ್ತಪ್ಪ ಡೊಂಬಾಳೆ, ಸಲೀಮ ಜಮಾದಾರ, ಚಕ್ರವರ್ತಿ ಬಸ್ಸಿನಕರ, ವಿದ್ಯಾರ್ಥಿಗಳಿದ್ದರು.

# ಶಿಕ್ಷಕರು ಮಕ್ಕಳ ಧ್ವನಿಯಾಗಿ ಕೆಲಸ ಮಾಡಿ: ಸಕ್ರೆಪ್ಪಗೌಡ ಬಿರಾದಾರ

## ಚಿತ್ತಾಪುರದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ರೋಡ್ ಟೂ ಸ್ಕೂಲ್ ಕಾರ್ಯಕ್ರಮ

• **ಕನ್ನಡ ಪ್ರಭ ವಾರ್ತೆ** ಚಿತ್ತಾಪುರ

ಮಕ್ಕಳಿಗಾಗಿ ಶಿಕ್ಷಣ ಇಲಾಖೆ ಇದೆ, ಮಕ್ಕಳು ಇರುವುದರಿಂದಲೇ ಎಲ್ಲ ಸ್ಥಾನಮಾನ ಹಾಗೂ ಅವಕಾಶಗಳು ಸಿಕ್ಕಿವೆ. ಹೀಗಾಗಿ ಶಿಕ್ಷಕರು ಮಕ್ಕಳ ಧ್ವನಿಯಾಗಿ ಕೆಲಸ ಮಾಡಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕ ಸಕ್ರೆಪ್ಪಗೌಡ ಬಿರಾದಾರ ಹೇಳಿದರು.

ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಅಶೋಕ್ ಲೇಲ್ಯಾಂಡ್, ಲರ್ನಿಂಗ್ ಲಿಂಕ್ಸ್ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ರೋಡ್ ಟೂ ಸ್ಕೂಲ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಮಕ್ಕಳ ಧ್ವನಿಯಾಗಿ ತಂದೆ ತಾಯಿ ಇರುವುದಕ್ಕೆ ಆಗುತ್ತಿಲ್ಲ. ಕಾರಣ ಅವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿ ಶ್ರಮಿಸುತ್ತಿರುತ್ತಾರೆ ಹಾಗಾಗಿ ಶಿಕ್ಷಕರೇ ಮಕ್ಕಳ ಧ್ವನಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ ಎಂದರು.

ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕೆಂಬ ಉತ್ಸಾಹದಿಂದ ಶಿಕ್ಷಕ ಹುದ್ದೆಗೆ ನೇಮಕರಾದವರಲ್ಲಿ ತುಡಿತ, ಬದ್ಧತೆ, ಕಾವು, ಚೇತನ ಎಷ್ಟು ದಿವಸ ಇತ್ತು, ಬರು ಬರುತ್ತಾ ಆ ಉತ್ಸಾಹವೇಕೆ ಕಡಿಮೆ ಆಯ್ತು ಎಂಬುದನ್ನು ಶಿಕ್ಷಕರು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದವೀರಯ್ಯ ರುದ್ನೂರ್ ಮಾತನಾಡಿ, ಶೈಕ್ಷಣಿಕ ವ್ಯವಸ್ಥೆ ಬದಲಾಯಿಸುವ ನಿಟ್ಟಿನಲ್ಲಿ ಶಿಕ್ಷಕರು ಆಲೋಚನೆ ಮಾಡಬೇಕಿದೆ, ಸರ್ಕಾರಿ ಶಾಲೆಗೆ ದುರ್ಬಲ ವರ್ಗದ ಮಕ್ಕಳು ಬರುತ್ತಾರೆ. ಹಾಗಾಗಿ ಆ ಮಕ್ಕಳ ಧ್ವನಿಯಾಗಿ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ಚಿತ್ತಾಪುರ ಮಾದರಿ ತಾಲೂಕು ಮಾಡುವ ಪ್ರಯತ್ನ ಮಾಡಬೇಕು ಎಂದರು.

ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಕಾರ್ಯಕ್ರಮ ಅಧಿಕಾರಿ ಗಿರೀಶ್ ಮಾತನಾಡಿ, ಭಾರತ ದೇಶದಲ್ಲಿ ಕಳೆದ 22 ವರ್ಷಗಳಿಂದ ಶೈಕ್ಷಣಿಕ ಸೇವೆಯಲ್ಲಿ ತೊಡಗಿದ ಲರ್ನಿಂಗ್ ಲಿಂಕ್ಸ್ ಫೌಂಡೇಶನ್ 22 ರಾಜ್ಯಗಳಲ್ಲಿ ಸೇವೆ ಸಲ್ಲಿಸುತ್ತಿದೆ ಪ್ರಸ್ತುತ ಚಿತ್ತಾಪುರ ತಾಲೂಕಿನ 242 ಶಾಲೆಗಳಲ್ಲಿ 6 ರಿಂದ 14 ವರ್ಷದ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.


ಅಶೋಕ ಲೇಲ್ಯಾಂಡ್ ಡಿಜಿಎಂ ಕೃಷ್ಣಾ ಶಂಕರ, ಎಸ್‌ಡಿಎಂಸಿ ಅಧ್ಯಕ್ಷ ಕಾಶಿನಾಥ ಗುತ್ತೇದಾರ ಮಾತನಾಡಿದರು. ಬಿಆರ್‌ಸಿ ಮಲ್ಲಿಕಾರ್ಜುನ ಸೇಡಂ, ಅಕ್ಷರ ದಾಸೋಹ ಅಧಿಕಾರಿ ಪ್ರಕಾಶ ನಾಯ್ಕೋಡಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳೂಂಡಗಿ, ಗೋವಿಂದ ರಾಠೋಡ, ವೆಂಕಟರೆಡ್ಡಿ, ವಿನೋದ ಗೌಳಿ, ಉಮೇಶ ನೀಲೂರ್, ಅನಿಲ ಕೊಡಂಬಲ್, ಬಸಪ್ಪ ಯಂಬತ್ನಾಳ್, ದೇವಪ್ಪ ನಂದೂರಕರ್, ಸುರೇಶ ಸರಾಫ್ ಸೇರಿದಂತೆ 90 ಶಾಲೆಯ ಮುಖ್ಯಶಿಕ್ಷಕರು ಇದ್ದರು. ಸಂತೋಷ ಶಿರನಾಳ ಸ್ವಾಗತಿಸಿದರು, ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಜಿಲ್ಲಾ ವ್ಯವಸ್ಥಾಪಕ ಸಂತೋಷ ನಿರೂಪಿಸಿದರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಿವಾನಂದ ನಾಲವಾರ ವಂದಿಸಿದರು.




**ಚಿತ್ತಾಪುರ ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ರೋಡ್ ಟೂ ಸ್ಕೂಲ್ ಕಾರ್ಯಕ್ರಮದ ಉದ್ಘಾಟನೆಯನ್ನು ಡಿಡಿಪಿಐ ಸಕ್ರೆಪ್ಪಗೌಡ ಬಿರಾದಾರ ನೆರವೇರಿಸಿದರು. ಬಿಇಒ ಸಿದ್ದವೀರಯ್ಯ ರುದ್ನೂರ್, ಅಶೋಕ್ ಲೇಲ್ಯಾಂಡ್ ಡಿಜಿಎಂ ಕೃಷ್ಣಾ ಶಂಕರ ಇತರರು ಇದ್ದರು.**

## ಡಾ.ಭಾಗ್ಯಶ್ರೀ ಪಾಟೀಲ್ ಸಲಹೆ | ಸೇಡಂನಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ

# ಮನೆಯೇ ಮೊದಲ ಪಾಠ ಶಾಲೆಯಾಗಲಿ



ಸೇಡಂನ ವಿಶ್ವಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಸ್ತ್ರೀ ರೋಗ ತಜ್ಞೆ ಡಾ.ಭಾಗ್ಯಶ್ರೀ ಪಾಟೀಲ್ ಉದ್ಘಾಟಿಸಿದರು. ಶ್ರೀ ಸದಾಶಿವ ಸ್ವಾಮೀಜಿ, ಪಿ.ಭೀಮರೆಡ್ಡಿ, ವಿಜಯಕುಮಾರ ಸೂರವಾರ, ಮಹಿಪಾಲರೆಡ್ಡಿ, ಅಬ್ದುಲ್ ಹಫೀಜ್ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಸೇಡಂ

ಮಕ್ಕಳಲ್ಲಿ ಸಂಸ್ಕಾರ ಬೆಳೆಯಬೇಕಾದರೆ ಮನೆಯೇ ಮೊದಲ ಪಾಠ ಶಾಲೆಯಾಗಬೇಕು. ತಾಯಿಯೇ ಮೊದಲ ಗುರುವಾದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ಸ್ತ್ರೀ ರೋಗ ತಜ್ಞೆ ಡಾ.ಭಾಗ್ಯಶ್ರೀ ಪಾಟೀಲ್ ಹೇಳಿದರು.

ವಿಶ್ವಜ್ಯೋತಿ ಆಂಗ್ಲ ಮಾಧ್ಯಮ ಶಾಲೆ ಆವರಣದಲ್ಲಿ ವಿದ್ಯಾಭಾರತಿ-ಕರ್ನಾಟಕದಿಂದ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಮಕ್ಕಳ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಾಲ್ಯದಲ್ಲಿ ಮಕ್ಕಳಿಗೆ ನೀಡಿದ ಸಂಸ್ಕಾರ, ಶಿಕ್ಷಣ ಅವರ ಜೀವನದಲ್ಲಿ ಶಾಶ್ವತವಾಗಿ ಉಳಿಯಲಿದೆ. ದಿನ ಕಳೆದಂತೆ ಪಾಲಕರು ನಮ್ಮ ನೆಲದ ಸಂಸ್ಕೃತಿ ಮರೆತು ಬದುಕುತ್ತಿದ್ದೇವೆ. ಇದರಿಂದ ಅಪಾಯವೇ ಹೆಚ್ಚು, ಹೊರತು ಉಪಯೋಗವಿಲ್ಲ. ಮಕ್ಕಳನ್ನು ಆಟವಾಡಲು ಬಿಡಿ ಎಂದು ಸಲಹೆ ನೀಡಿದರು.

ಕೊತ್ತಲ ಬಸವೇಶ್ವರ ದೇವಾಲಯದ ಶ್ರೀ ಸದಾಶಿವ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಇಂದಿನ ಮಕ್ಕಳು ಮೊಬೈಲ್ ಬಳಸುವುದರಲ್ಲಿ ಮುಂದಿದ್ದು, ಇದನ್ನು ಕಂಡು ಪಾಲಕರು ಸಂತಸಗೊಳ್ಳುತ್ತಾರೆ. ಆದರೆ ಇದು ಉತ್ತಮ ಬೆಳವಣಿಗೆಯಲ್ಲ. ಇಂದಿನ ಮಕ್ಕಳಿಗೆ ನಮ್ಮ ನೆಲದ ಕಲೆಗಳ ಬಗ್ಗೆ ಸ್ವಲ್ಪವೂ ಮಾಹಿತಿ ಇಲ್ಲ. ಹೀಗಾಗಿ ಪಾಲಕರು ನಮ್ಮ ನೆಲದ ಹೆಮ್ಮೆಯ ಬದುಕಿನ ಬಗ್ಗೆ ಮಕ್ಕಳಿಗೆ ತಿಳಿಸಬೇಕು ಎಂದು ಕರೆ ನೀಡಿದರು.

ವಿದ್ಯಾಭಾರತಿ ಸಂರಕ್ಷಕ ಪಿ.ಭೀಮರೆಡ್ಡಿ, ಅಬ್ದುಲ್ ಹಫೀಜ್ ಮಾತನಾಡಿದರು. ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ವಿಜಯಕುಮಾರ ಸೂರವಾರ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾಭಾರತಿ ಜಿಲ್ಲಾಧ್ಯಕ್ಷ ಮಹಿಪಾಲರೆಡ್ಡಿ ಇದ್ದರು. ನಾಗೇಶ ಮೆಗಂಜಿ ಸ್ವಾಗತಿಸಿದರು. ಶ್ರೇಯಾ, ರಾಘವಿ ನಿರೂಪಣೆ ಮಾಡಿದರು. ವರ್ಷ, ಸಮರ್ಥ ವಂದಿಸಿದರು.



Most Important Topics For

# Science & Technology

UPSC Prelims & Mains

# ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ, ಬಿಟಿ

## ಮುಖ್ಯಮಂತ್ರಿ ಜೊತೆ ಚರ್ಚೆ– ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕಂಪನಿಗಳನ್ನು (ಐಟಿ-ಬಿಟಿ) ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಕುರಿತು ಮುಖ್ಯಮಂತ್ರಿ ಮತ್ತು ಕಂಪನಿಗಳ ಮುಖ್ಯಸ್ಥರ ಜೊತೆ ಚರ್ಚೆ ನಡೆಸಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.



ಸಂತೋಷ್ ಲಾಡ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ 7,500ಕ್ಕೂ ಹೆಚ್ಚು ಐಟಿ-ಬಿಟಿ ಕಂಪನಿಗಳಿದ್ದು, ಲಕ್ಷಾಂತರ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ-ಬಿಟಿ ಕಂಪನಿಗಳು ಬಂದರೆ ಅಲ್ಲಿನ ನೌಕರರಿಗೆ ಸಹಾಯವಾಗಲಿದೆ' ಎಂದು ಅಭಿಪ್ರಾಯಪಟ್ಟರು.

'ಐಟಿ-ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ನೌಕರರನ್ನು ಕೆಲಸದಿಂದ ತೆಗೆದುಹಾಕುವುದು, ಲೈಂಗಿಕ ಕಿರುಕುಳ, ಮಾನಸಿಕ ಒತ್ತಡ, ಕೇವಲ ರಾತ್ರಿ ಪಾಳಿ ಕೆಲಸ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದರೆ, ಈ ಕಂಪನಿಗಳು ಕಾರ್ಮಿಕ ಕಾನೂನಿಂದ ಹೊರಗಿರುವುದರಿಂದ, ಅಲ್ಲಿನ ನೌಕರರು ನೀಡುವ ದೂರುಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲು ಅವಕಾಶ ಇಲ್ಲ. ಹೀಗಾಗಿ, ಐಟಿ-ಬಿಟಿ ಕಂಪನಿಗಳನ್ನು ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಬಗ್ಗೆ ಚರ್ಚೆ ಮಾಡಲಾಗುವುದು. ಈ ಹಿಂದೆಯೂ ಈ ಪ್ರಸ್ತಾಪ ಇತ್ತು. ಆದರೆ, ಯಾವುದೇ ಕ್ರಮ ಆಗಿಲ್ಲ' ಎಂದರು.

'ಹಾಗೆಂದು, ಐಟಿ-ಬಿಟಿ ಕಂಪನಿಗಳು ಒಳ್ಳೆಯ ಕೆಲಸ ಮಾಡುತ್ತಿಲ್ಲ ಎಂದರ್ಥವಲ್ಲ. ಕಂಪನಿಗಳಿಗೆ ತೊಂದರೆ ನೀಡುವ ಉದ್ದೇಶವೂ ಇಲ್ಲ. ಕಂಪನಿಯ ನೌಕರರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಕಂಪನಿಗಳ ಮುಖ್ಯಸ್ಥರನ್ನು ಕರೆಸಿ ಮಾತುಕತೆ ನಡೆಸಲು ತೀರ್ಮಾನಿಸಲಾಗಿದೆ' ಎಂದೂ ಹೇಳಿದರು.


**ಕನಿಷ್ಠ ವೇತನ ಚರ್ಚೆ:** ಕುಶಲ ಹಾಗೂ ಕೌಶಲರಹಿತ ಕಾರ್ಮಿಕರಿಗೆ ನ್ಯಾಯಾಲಯದ ಮಾರ್ಗಸೂಚಿ ಪ್ರಕಾರ ಕನಿಷ್ಠ ವೇತನ ನಿಗದಿಪಡಿಸುವ ಕುರಿತು ಕೈಗಾರಿಕಾ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳ ಜತೆ ಸಚಿವ ಲಾಡ್ ಸಭೆ ನಡೆಸಿದರು.

ಎಫ್‌ಕೆಸಿಸಿಐ, ಸಿಐಐ ಹಾಗೂ ಕಾಸಿಯಾದ ಪದಾಧಿಕಾರಿಗಳ ಜತೆ ಸಭೆ ನಡೆಸಿದ ಲಾಡ್, ಕನಿಷ್ಠ ವೇತನ ನಿಗದಿ ಮಾಡಲು ಇರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಅದಾದ ಬಳಿಕ, ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಇಂಟಕ್, ಸಿಐಟಿಯು, ಟಿಯುಸಿಸಿ, ಎಚ್‌ಎಂಕೆಪಿ, ಗಾರ್ಮೆಂಟ್ ನೌಕರರ ಸಂಘಟನೆಗಳ ಪದಾಧಿಕಾರಿಗಳ ಜತೆ ಚರ್ಚಿಸಿ, ಅವರ ಬೇಡಿಕೆಗಳನ್ನು ಸ್ವೀಕರಿಸಿದರು.

# ಇನ್ಫೋಸಿಸ್‌ಗೆ 1.5 ಶತಕೋಟಿ ಡಾಲರ್ ಎಐ ಗುತ್ತಿಗೆ ನಷ್ಟ

ನವದೆಹಲಿ: ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಕಂಪನಿಗಳಲ್ಲಿ ಒಂದಾದ ಇನ್ಫೋಸಿಸ್, 1.5 ಶತಕೋಟಿ ಡಾಲರ್ ಮೊತ್ತದ ಕೃತಕ ಬುದ್ಧಿಮತ್ತೆಯ (ಎಐ) ಜಾಗತಿಕ ಗುತ್ತಿಗೆಯೊಂದನ್ನು ಕಳೆದು ಕೊಂಡಿದೆ. ಹೆಸರನ್ನು ಬಹಿರಂಗಪಡಿಸದ ಜಾಗತಿಕ ಕಂಪನಿ ಎಐ ಪರಿಹಾರಗಳನ್ನು ಕೇಂದ್ರೀಕರಿಸಿದ ಒಪ್ಪಂದ





ವೊಂದಕ್ಕೆ ಸಹಿ ಹಾಕಿತ್ತು. 15 ವರ್ಷಗಳ ಅವಧಿಯ ಆ ಒಡಂಬಡಿಕೆಯನ್ನು ರದ್ದು ಮಾಡಿರುವುದು ಇನ್ಫೋಸಿಸ್‌ಗೆ ದೊಡ್ಡ ಹೊಡೆತವಾಗಿದೆ. ಇದೇ ಸೆಪ್ಟೆಂಬರ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಇನ್ಫೋಸಿಸ್‌ನ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ನಿರಂಜನ್ ರಾಯ್ ಹಠಾತ್ತನೆ ರಾಜೀನಾಮೆ ನೀಡಿದ ಎರಡು ವಾರಕ್ಕಿಂತ ಕಡಿಮೆ ಅವಧಿಯಲ್ಲಿ ಈ ವಿದ್ಯಮಾನ ನಡೆದಿದೆ.

# ಅತ್ಯಾಧುನಿಕ ತಂತ್ರಜ್ಞಾನಗಳ ಸಂವೇದನಾಶೀಲ ಬರಹ

ವಿಜ್ಞಾನ ಮತ್ತು ತಂತ್ರಜ್ಞಾನ ಯಾವ ವೇಗದಲ್ಲಿ ಬೆಳೆಯುತ್ತಿದೆ ಅನ್ನುವುದನ್ನು ಅರಿಯುವುದಕ್ಕೆ ನಾವು ನಮ್ಮ ಕೈಯಲ್ಲಿರುವ ಮೊಬೈಲನ್ನು ಗಮನಿಸಿದರೆ ಸಾಕು. ನೆನಪಿಗೆ ಸರಾಗವಾಗಿ ಎಟಕುವಷ್ಟು ಹಿಂದೆಯಷ್ಟೇ ದೇಹದ ತುಂಬಾ ಸ್ವಿಚ್‌ಗಳನ್ನು ಹೊಂದಿದ್ದ ಮೊಬೈಲ್‌ಗಳು ಇಂದು ಸ್ಪರ್ಶ ಮಾತ್ರದಿಂದಲೇ ಕಾರ್ಯನಿರ್ವಹಿಸುತ್ತಿವೆ. ಬಾಹ್ಯಾಕಾಶ ಈಗ ಅಪರಿಚಿತವಾಗಿ ಉಳಿದಿಲ್ಲ. ಜನ, ಊರು, ದೇಶ, ವಿದೇಶಗಳು ದೂರ ದೂರವಾಗಿ ಉಳಿದಿಲ್ಲ. ಕಟ್ಟಬೇಕಿದ್ದ ಮನೆಗಳನ್ನು ಇಂದು ಮುದ್ರಿಸಬಹುದಾಗಿದೆ. ಆದರೆ, ಇವೆಲ್ಲವುಗಳ ಆಳ-ಅಗಲವನ್ನು ತಿಳಿಸುವ ಕೆಲಸವಾಗಬೇಕಿರುವುದು ವಿಜ್ಞಾನ ಬರಹಗಳಿಂದ. ಅಂತಹ ಕೆಲಸ ಕನ್ನಡದ ಮಟ್ಟಿಗೆ ಇಂದು ಗಮನಾರ್ಹ ಪ್ರಮಾಣದಲ್ಲಿ ಆಗುತ್ತಿದೆ.

ಗುರುರಾಜ್ ಎಸ್. ದಾವಣಗೆರೆ ಅವರ 'ವಿರಾಟ್ ವಿಜ್ಞಾನ' ಕೃತಿ ಇದಕ್ಕೆ ಒಂದು ಸೇರ್ಪಡೆ. ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಬರೆಯುವವರಲ್ಲಿ ಪ್ರಮುಖರಾಗಿರುವ ಗುರುರಾಜ್ ಅವರ ಕೃತಿಯಲ್ಲಿ ಹೊಸ ತಂತ್ರಜ್ಞಾನದ ಬಗೆಗಿನ ಮಾಹಿತಿಗಳು ಮಾತ್ರವಲ್ಲದೆ ಸಂವೇದನಾಶೀಲ ಬರಹಗಳೂ ಇದೆ.




ವಿರಾಟ್ ವಿಜ್ಞಾನ- ಅತ್ಯಾಧುನಿಕ ವಿಜ್ಞಾನ - ತಂತ್ರಜ್ಞಾನದ ಕಥನಗಳು

ಲೇ: ಗುರುರಾಜ್ ಎಸ್. ದಾವಣಗೆರೆ

ಪ್ರ: ವಸಿಷ್ಠ ಬುಕ್ಸ್ ಬೆಂಗಳೂರು

ಪುಟ: 156

ಬೆಲೆ: 160 ರೂ.



Fully Editable Text
Free Fonts Used
HEALTH

# MULTIPLE FLU VIRUSES

HEALTH

**NAMRATA SINDWANI** @Bengaluru

WHILE most of the year 2023 had kept Covid-19 pretty much in the back of people's minds, a new viral mutation, JN.1, emerged as a scare, although mild but highly transmissible. The new variant and the scare is likely to take us through and into the new year. Experts are still researching whether the rising number of Covid cases are linked to the new subvariant, but 2023, at least towards its fag end, has returned the old scare back to dominate people's minds.

During the Covid years (2020-early 2022), several viral variants came into circulation, but people were not exposed to them due to the lockdown.

The uncertainty of COVID-19 emerging and rapidly spreading had then resulted in a complete shutdown of the entire world. As isolation and mask-wearing became the 'new normal', to protect oneself from the virus, it weakened people's immunity in the post-pandemic era, such that after COVID-19, a viral fever wave was observed throughout the year instead of just through the climate-changing phases.

As viruses keep mutating, even doctors faced difficulties understanding the exact cause of the flu at certain times. The fear of Covid, which had gone — at least from people's minds — is back now and the cases are rising, thanks to the new variant JN.1 in neighbouring Kerala as well as Karnataka. The last few days of the year are seeing experts insisting on people — mainly the elderly, those with comorbidities and pregnant women — wearing masks and following Covid-appropriate behaviour (CAB) to minimise the risk of infection.

Now, with every changing season, some old viruses or their mutations are circulating leading to flu-like cases. Post-Covid, individuals are seen building an exaggerated immune response, which proactively reacts to viruses, causing fever or cold. The same has contributed to a surge in dengue/dengue-like cases in September 2023, and close to 60 per cent of the cases have been diagnosed as dengue-like due to a lack of study of the dengue-causing viruses.

Especially, Bengaluru, with an open drainage network, provided favourable breeding conditions for viruses and also caused an increase in virus-borne diseases. Throughout 2023, the city and the state witnessed frequent dengue, dengue-like cases, respiratory syncytial virus (RSV) infections, viral pneumonia, conjunctivitis, and gastroenteritis cases in phases. While the weather-changing period saw a significant spikes in footfalls at the outpatient departments (OPDs), few cases were consistently seen during other times. Overall, 2023 has remained a year of viral infections of different kinds throughout, but now the year is exiting leaving a scare that could dominate minds and policies in the days to come.

## 2023 HIGHLIGHTS

### 438 Namma clinics launched

The Karnataka government inaugurated 438 namma clinics across Karnataka aiming to improve accessibility and provide preventive facilities within people's neighbourhoods. However, the clinics have received criticism from experts stating that it is 'gimmicky' and only were launched ahead of elections to gain a vote bank. Instead, the state must have invested in improving the already present health infrastructure.




### Rural service not mandatory for doctors


The state legislative assembly passed the Karnataka Compulsory Service by Candidates Completed Medical Courses (Amendment Bill), exempting MBBS graduates from mandatory rural service. However, this decision is reportedly taken to cut down on the salary expenses of doctors which takes a huge chunk in the health budget.

### K'taka 1st state to launch 'dementia action plan'


In order to ensure preparedness for an expected high incidence of dementia patients in India, the state declared it a public health priority. The action plan will focus on creating public awareness, reducing stigma, screening high-risk groups (above 60 years) for dementia, providing home-based caregiver assistance, and promoting brain health and mental health for overall well-being. The state will also maintain a registry to study the prevalence of the disease.

### Single-use dialysis centres

Single-use dialysers and an increased number of dialysis centres were introduced to be set up across district and taluk-level hospitals. Experts have suggested it will reduce cross-infection among healthcare workers and patients. In case of haemodialysis, the same equipment is used multiple times after washing. The used dialyser and tubes have to be cleaned after every dialysis procedure.



EXPRESS ILLUSTRATION



**ಬೀದರ್‌ನ ಬಿ.ವಿ.ಬಿ ಮಹಾವಿದ್ಯಾಲಯದ ಆವರಣದಲ್ಲಿ ಪತಂಜಲಿ ಯೋಗ ಸಮಿತಿ, ಯುವ ಭಾರತ, ಮಹಿಳಾ ಘಟಕ, ಕಿಸಾನ್ ಘಟಕ, ಸ್ವಾಭಿಮಾನ ಟ್ರಸ್ಟ್ ವತಿಯಿಂದ ವಿಶೇಷ ಯೋಗ, ಪ್ರಾಣಾಯಾಮ, ಧ್ಯಾನ ಶಿಬಿರ ಜರುಗಿತು.**

# 'ನಿತ್ಯ ಒಂದು ಗಂಟೆ ಯೋಗಾಭ್ಯಾಸದಿಂದ ಬದುಕು ಸುಂದರ'

**ಸಂ.ಕ.ಸಮಾಚಾರ ಬೀದರ್:** ಜೀವನದ ಒತ್ತಡಗಳು ಕಡಿಮೆ ಮಾಡಲು ಹಾಗೂ ರೋಗ ರುಜಿನಗಳಿಂದ ದೂರವಿರಲು ದಿನಾಲು ಯೋಗ ಮಾಡಬೇಕು. ಇದರಿಂದ ಬದುಕು ಸುಂದರವಾಗುತ್ತದೆ ಎಂದು ಅಂತಾರಾಷ್ಟ್ರಿಯ ಯೋಗ ಗುರು ದಕ್ಷಿಣ ಭಾರತ ಕರ್ನಾಟಕ ರಾಜ್ಯ ಪತಂಜಲಿ ಯೋಗ ಪ್ರಭಾರಿ ಯೋಗಗುರು ಭವರಲಾಲ ಹೇಳಿದರು.

ಇಲ್ಲಿಯ ಬಿ.ವಿ.ಬಿ ಮಹಾವಿದ್ಯಾಲಯದ ಆವರಣದಲ್ಲಿ ಪತಂಜಲಿ ಯೋಗ ಸಮಿತಿ, ಯುವ ಭಾರತ, ಮಹಿಳಾ ಘಟಕ, ಕಿಸಾನ್ ಘಟಕ, ಸ್ವಾಭಿಮಾನ ಟ್ರಸ್ಟ್ ವತಿಯಿಂದ ನಡೆದ ವಿಶೇಷ ಯೋಗ, ಪ್ರಾಣಾಯಾಮ, ಧ್ಯಾನ ಶಿಬಿರದಲ್ಲಿ ಮಾತನಾಡಿ ಯೋಗವು ರೋಗಿಗೆ ಚಿಕಿತ್ಸಾ ಪದ್ಧತಿ, ಸಾಧಕನಿಗೆ ಸಾಧನಾ ಪದ್ಧತಿ, ಯೋಗಿಗೆ ಜೀವನ ಪದ್ಧತಿಯಾಗಿದೆ. ದಿನದ 24 ಗಂಟೆಗಳಲ್ಲಿ ಒಂದು ಗಂಟೆ ಯೋಗಕ್ಕಾಗಿ ಮೀಸಲಿಡಬೇಕು. ನಮ್ಮ ದೈನಂದಿನ ಕೆಲಸ ಕಾರ್ಯಗಳು ಯೋಗ-ಆಯುರ್ವೇದದೊಂದಿಗೆ ಪ್ರಾರಂಭವಾಗಬೇಕು. ನಿತ್ಯ ಯೋಗ ಮಾಡುವುದರಿಂದ ನಮ್ಮ ಕೆಲಸಗಳು ತುಂಬಾ ಚೆನ್ನಾಗಿ ಸರಳವಾಗಿ ಆಗುತ್ತವೆ ಎಂದರು. ಪತಂಜಲಿ ಯೋಗ ಸಮಿತಿಯ ಜಿಲ್ಲಾ ಪ್ರಭಾರಿ ಯೋಗೇಂದ್ರ ಯದಲಾಪುರೆ ಮಾತನಾಡಿ ಯೋಗ ನಮ್ಮೆಲ್ಲರ ಜೀವನ ಪದ್ಧತಿಯಾಗಬೇಕು. ನಮ್ಮ ಋಷಿ ಮುನಿಮುನಿಗಳು ವಿಶ್ವಕ್ಕೆ ಭಾರತ ನೀಡಿದ ಅತ್ಯಂತ ಶ್ರೇಷ್ಠ ಕೊಡುಗೆಯಾಗಿದೆ ಎಂದರು.

ಯೋಗಗುರು ಭವರಲಾಲ ಆರ್ಯ ಅವರು ಯೋಗ, ಪ್ರಾಣಾಯಮ, ಧ್ಯಾನ ಸರಾಗವಾಗಿ, ಅತಿ ಸುಂದರವಾಗಿ ಸರಳವಾಗಿ ಮಾಡಿ ತೋರಿಸಿದರು, ಜನರಿಗೆ ಮಾಡಿಸಿದರು. ಬಿ.ವಿ.ಬಿ ಕಾಲೇಜಿನ ಪದವಿ ಪ್ರಾಂಶುಪಾಲ ಡಾ.ಪಿ.ವಿಠ್ಠಲ ರೆಡ್ಡಿ, ಪ್ರಮುಖರಾದ ಜಗದೀಶ ಖೂಬಾ, ಚಂದ್ರಶೇಖರ ಹೆಬ್ಬಳೆ, ಜಯರಾಜ ಖಂಡ್ರೆ, ಬಸವರಾಜ ಉಂಡಿ, ಚಂದ್ರಕಾಂತ ಮಿರ್ಚೆ, ಅರುಣಕುಮಾರ ಮೊಕಾಶಿ, ಶಿವಕುಮಾರ ಸಂಗೋಳಗಿ, ಸೂರ್ಯಕಾಂತ ಕುರುಬಖೇಳಗಿ. ಜಿ.ಬಿ ಪಾಂಚಾಳ, ಪಂಡಿತ ಪಾಟೀಲ್, ರಾಘವೇಂದ್ರ ಕುಲಕರ್ಣಿ, ಶಿವಾಜಿ ಭೋಸ್ಲೆ, ಶ್ರೀನಾಥ ಮಸಕಲೆ, ಸುಧಾಕರ ಪೊಲಕಪಲ್ಲಿ ಮತ್ತಿತರಿದ್ದರು.

# ಕೋವಿಡ್: 'ಹಿಂದಿನ ತಪ್ಪು' ಎಂಬ ಸಿಎಂ ಹೇಳಿಕೆಗೆ ಸುಧಾಕರ್ ಆಕ್ರೋಶ

## ಸಾಂಕ್ರಾಮಿಕದ ಆರಂಭಿಕ ದಿನಗಳನ್ನು ಇಂದಿನ ಪರಿಸ್ಥಿತಿಗೆ ಹೋಲಿಸಬೇಡಿ: ಮಾಜಿ ಸಚಿವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶತಮಾನದ ಭೀಕರ ಕೋವಿಡ್ ಸಾಂಕ್ರಾಮಿಕ ಅಪ್ಪಳಿಸಿದ ಆರಂಭದ ದಿನಗಳನ್ನು 4 ವರ್ಷಗಳ ನಂತರದ ಇಂದಿನ ಪರಿಸ್ಥಿತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೋಲಿಕೆ ಮಾಡುವುದು ಅಸಂಬದ್ಧ ಹಾಗೂ ನಿರರ್ಥಕ ಎಂದು ಮಾಜಿ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.

ಕೋವಿಡ್ ಸೋಂಕಿನ ಕುರಿತು ಇತ್ತೀಚೆಗೆ ಉನ್ನತ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹಿಂದಿನ ತಪ್ಪುಗಳಾಗದಂತೆ ನೋಡಿಕೊಳ್ಳಬೇಕು ಎಂದಿದ್ದರು. ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ 'ಕನ್ನಡಪ್ರಭ' ವರದಿ ಉಲ್ಲೇಖಿಸಿ ಜಾಲತಾಣ 'ಎಕ್ಸ್'ನಲ್ಲಿ ಸುಧಾಕರ್ ಪೋಸ್ಟ್ ಮಾಡಿದ್ದಾರೆ.

'ಕೋವಿಡ್ ಸೋಂಕು ನಿಯಂತ್ರಣ ಕುರಿತಂತೆ ಹಿಂದಿನ ಬಿಜೆಪಿ ಸರ್ಕಾರದ ಬಗ್ಗೆ ಹಗುರವಾಗಿ ಮಾತನಾಡಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶೋಭೆ ತರುವುದಿಲ್ಲ. 2020ರ ಆರಂಭದಲ್ಲಿ ಕೊರೋನಾ ವೈರಾಣು ಜಗತ್ತನ್ನು ಅಪ್ಪಳಿಸಿದಾಗ ಆಗಿನ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿತ್ತು. ವೈರಸ್‌ನ ಗುಣ ಲಕ್ಷಣಗಳು, ವೈರಾಣು ಹರಡುವ ತೀವ್ರತೆ, ಅದನ್ನು ಪರೀಕ್ಷೆ ಮಾಡುವ ವಿಧಾನ, ಸೋಂಕಿತರ ಮೇಲೆ ಅದು ಬೀರುವ ಪರಿಣಾಮ, ಆರೋಗ್ಯ ವ್ಯವಸ್ಥೆಯ ಮೇಲೆ ಉಂಟಾಗುವ ಒತ್ತಡ, ಚಿಕಿತ್ಸೆಗೆ ಬೇಕಾದ ಸಿದ್ಧತೆ ಸೇರಿದಂತೆ ಇವೆಲ್ಲವುಗಳ ಬಗ್ಗೆ ಯಾರಿಗೂ ಅಂದಾಜಿರಲಿಲ್ಲ, ಅನುಭವವೂ ಇರಲಿಲ್ಲ' ಎಂದಿದ್ದಾರೆ.



**ಅಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಮುಖ್ಯಮಂತ್ರಿಗಳು ತಮ್ಮ ಅನಗತ್ಯ ರಾಜಕೀಯ ಟೀಕೆ- ಟಿಪ್ಪಣಿ ಬದಿಗಿಟ್ಟು, ತಮ್ಮ ಜವಾಬ್ದಾರಿ ನಿರ್ವಹಿಸಿದರೆ ಅವರಿಗೂ ರಾಜ್ಯಕ್ಕೂ ಒಳ್ಳೆಯದು.**

• **ಡಾ.ಕೆ.ಸುಧಾಕರ್** ಮಾಜಿ ಸಚಿವ

'ಆರಂಭದ ದಿನಗಳಲ್ಲಿ 200 ಕೋವಿಡ್ ಪರೀಕ್ಷೆಯ ಸಾಮರ್ಥ್ಯ ಇರಲಿಲ್ಲ. ಆದರೆ, ಇಂದು ನಮ್ಮ ವ್ಯವಸ್ಥೆ ಯಾವ ಮಟ್ಟಿಗೆ ಸಿದ್ಧವಾಗಿದೆ ಎಂದರೆ ದಿನವೊಂದಕ್ಕೆ ಬೇಕಾದರೆ 3 ಲಕ್ಷ ಸ್ಯಾಂಪಲ್‌ಗಳನ್ನು ಪರೀಕ್ಷಿಸಬಹುದು. ಪ್ರತಿ ಜಿಲ್ಲಾಸ್ಪತ್ರೆಯಲ್ಲೂ ಒಂದು ಆಕ್ಸಿಜನ್ ಘಟಕ, ಪ್ರತಿ ತಾಲೂಕು ಆಸ್ಪತ್ರೆಯಲ್ಲಿ ಐಸಿಯು, ಆಕ್ಸಿಜನ್ ಬೆಡ್ ವ್ಯವಸ್ಥೆಯಾಗಿದೆ.

ವೈರಾಣು ವಿರುದ್ಧ ಲಸಿಕೆ ಕಂಡು ಹಿಡಿಯಲಾಗಿದೆ. ಪ್ರತಿಯೊಬ್ಬರಿಗೂ ಮೂರು ಡೋಸ್ ಅಥವಾ ಕನಿಷ್ಠ ಎರಡು ಡೋಸ್ ಲಸಿಕೆ ನೀಡಲಾಗಿದೆ. ಅಂದಿನ ನಮ್ಮ ಸರ್ಕಾರ ಸಮರೋಪಾದಿಯಲ್ಲಿ ಕೆಲಸ ಮಾಡಿದ್ದರಿಂದಲೇ ಇಂದು ನಮ್ಮ ಆರೋಗ್ಯ ವ್ಯವಸ್ಥೆ ಇಷ್ಟು ಸನ್ನದ್ಧವಾಗಿರಲು ಸಾಧ್ಯವಾಗಿದೆ' ಎಂದು ಸುಧಾಕರ್ ಹೇಳಿದ್ದಾರೆ.


Business Finance

New challenge is BCCI filing insolvency plea against the former cricket team sponsor

# BYJU'S YEAR OF CHALLENGES: WILL 2024 BE ANY DIFFERENT?

UMA KANNAN @ Bengaluru



THE year 2023 has not turned up well for Indian start-ups – none more so than Byju's, the marquee name in the Indian start-up and Unicorn space. The edtech company, which was not so long ago seen as a testament to the success of India's start-up ecosystem, has seen it all during the year –investigation for FEMA violation, large-scale lay-offs, defaults and mass exodus at the top.

And as the year draws to a close, the Byju Raveendran founded firm is now facing a new challenge – the Board of Control for Cricket in India (BCCI) filing an insolvency petition against the erstwhile sponsor of Indian cricket team. Though every now and then founder Byju Raveendran held shareholders meetings and took steps to keep employee morale up, edtech experts and analysts say these challenges show sheer inability in reading the situation and taking timely corrective action and cutting the cash drain.

On December 5, about 50 leaders attended an interactive leadership huddle and Byju Raveendran himself discussed five challenges that the company faced in 2023. We list here the five challenges faced by the company.

### Litigation over Term Loan B

The firm secured a $1.2 billion term loan in November 2021. It went on an acquisition spree and lenders have been demanding for a full refund. This challenge, according to Byju Raveendran, could be resolved post the sale of Epic, a subsidiary of Byju's in the US.

Byju's has been trying to sell US-based digital reading platform Epic that it acquired in July 2021 for $500 million. Previously the company had acquired Osmo for $120 million, WhiteHat Jr for $300 million, Aakash for about $1 billion. It also plans to sell Great Learning, a professional learning platform that it acquired for about $600 million. According to Tracxn, the company has made 19 acquisitions so far and nine acquisitions in 2021 alone.

"As a keen observer of Byju's, I was unable to understand the strategic intent behind their acquisitions. For example, the company was built for disrupting classroom teaching and making high quality coaching possible to a wider audience through online. If this was the core business purpose, it baffles me when Byju's buys out Aakash," says Ganesh Mahadevan, Partner, Thinksynq.

This exact business is what Byju's was going after originally. Did they do it because their core business was not gaining traction or they just wanted to build a topline quickly by buying out the large legacy player. If it is the former then the very purpose for which Byju's was built is shaking and if it is the latter lazy short-term thinking," adds Mahadevan.

### Delay in FY22 financials

After repeated delays in filings its FY22 results with the Ministry of Corporate Affairs (MCA), edtech company Byju's last month reported an EBITDA loss of the core business to Rs 2,253 crore y-o-y in FY22, about 6% lower than Rs 2,406 crore loss it posted in the previous year. However, only during the recent Annual General Meeting, its FY22 earnings were approved. BDO was reappointed as the statutory auditors of the company.

In June, its auditor- Deloitte Haskins & Sells, the biggest audit firm, exited with immediate effect due to the delay in the filing of FY22 financial results. Byju's immediately announced the appointment of BDO (MSKA & Associates) as statutory auditors for the year commencing from FY22 for the next five years.

Byju Raveendran pledged his properties to raise funds to pay staff salaries.

Anil Joshi, Managing Partner, Unicorn India Ventures, says, the edtech sector is currently going through a challenging phase mainly due to the drop in online adoption model and revenue. "Low interest from investors is resulting in cash flow issues for growing companies with higher burn. Though there is potential in the model but needs to evolve post normalcy in the education sector post pandemic," Joshi adds.

### ED notice

Recently, the Enforcement Directorate (ED) issued a show-cause notice to Byju's in relation to FEMA (Foreign Exchange Management Act) violations. According to Byju's, the notice was related to procedural deficiencies under FEMA and that most of these issues have already been addressed.

The federal probe agency had initiated investigation on the basis of various complaints regarding the foreign investment received by the company Think and Learn Private Limited and the business conduct of the company.

### NOT YET OUT OF THE WOOD

- Byju's claims it has over 150 million registered learners globally and a presence in 120 countries
- Byju Raveendran in December said the company will overcome challenges in next three months
- The founder pledged his houses to pay staff salaries
- The company was valued at $22 billion in July 2022, and recently investment company Prosus marked down its valuation to less than $3 billion
- Byju's reported an EBITDA loss of ₹2,253 crore in FY22 compared to ₹2,406 crore reported in FY21
- Byju's will launch Aakash IPO by mid-2024
- Byju's has been trying to sell US-based digital reading platform Epic that it acquired in July 2021 for $500 million

### Davidson Kempner loan

The family office of Ranjan Pai, Manipal Education and Medical Group Chairman, invested ₹1,400 crore in the edtech firm's subsidiary Aakash Education Services to clear its debt to Davidson Kempner. In structured debt in May, Kempner had provided the edtech company with $250 million, but it withheld about $100 million due to the crisis in Byju's. Byju Raveendran said Aakash is now set for a record-breaking admissions season.

In June, Byju's announced that it will launch the Initial Public Offering (IPO) of its subsidiary, Aakash Education Services Limited (AESL) mid next year. It had said that AESL's revenue was on track to reach Rs 4,000 crore with an EBITDA of Rs 900 crore in the fiscal year 2023-24. With over 325 centres, Aakash serves over 400,000 students across the country.

### Resource optimisation

One of the challenges of the edtech company is the need to tackle resource optimisations to achieve profitability at the group level. After taking over as the India CEO of the edtech firm in September, Arjun Mohan started a business restructuring exercise to simplify operating structures, reduce the cost base and better cash flow management.

The edtech firm is now focusing on Byju's 3.0, which is about deep tech driven personalisation with the right approach and accountability to sales. The company has been laying off many employees, and in September, as part of its restructuring exercise under Arjun Mohan, it started firing about 4,000 employees. Gaurav VK Singhvi, co-founder of We Founder Circle, says the next two quarters might still be bit bumpy for edtech sector. "However, come April 2024, we are gearing up for a positive turnaround in the world of edtech. While we brace ourselves for a short-term dip, the horizon is painted with the colours of growth and resurgence," he adds.

# ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ, ಬಿಟಿ

## ಮುಖ್ಯಮಂತ್ರಿ ಜೊತೆ ಚರ್ಚೆ– ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕಂಪನಿಗಳನ್ನು (ಐಟಿ-ಬಿಟಿ) ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಕುರಿತು ಮುಖ್ಯಮಂತ್ರಿ ಮತ್ತು ಕಂಪನಿಗಳ ಮುಖ್ಯಸ್ಥರ ಜೊತೆ ಚರ್ಚೆ ನಡೆಸಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.



ಸಂತೋಷ್ ಲಾಡ್

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದಲ್ಲಿ 7,500ಕ್ಕೂ ಹೆಚ್ಚು ಐಟಿ -ಬಿಟಿ ಕಂಪನಿಗಳಿದ್ದು, ಲಕ್ಷಾಂತರ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕ ಕಾನೂನು ವ್ಯಾಪ್ತಿಗೆ ಐಟಿ-ಬಿಟಿ ಕಂಪನಿಗಳು ಬಂದರೆ ಅಲ್ಲಿನ ನೌಕರರಿಗೆ ಸಹಾಯವಾಗಲಿದೆ' ಎಂದು ಅಭಿಪ್ರಾಯಪಟ್ಟರು.

'ಐಟಿ-ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುವ ನೌಕರರನ್ನು ಕೆಲಸದಿಂದ ತೆಗೆದುಹಾಕುವುದು, ಲೈಂಗಿಕ ಕಿರುಕುಳ, ಮಾನಸಿಕ ಒತ್ತಡ, ಕೇವಲ ರಾತ್ರಿ ಪಾಳಿ ಕೆಲಸ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದರೆ, ಈ ಕಂಪನಿಗಳು ಕಾರ್ಮಿಕ ಕಾನೂನಿಂದ ಹೊರಗಿರುವುದರಿಂದ, ಅಲ್ಲಿನ ನೌಕರರು ನೀಡುವ ದೂರುಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಳ್ಳಲು ಅವಕಾಶ ಇಲ್ಲ. ಹೀಗಾಗಿ, ಐಟಿ-ಬಿಟಿ ಕಂಪನಿಗಳನ್ನು ಕಾರ್ಮಿಕ ಕಾನೂನು ವ್ಯಾಪ್ತಿಗೆ ತರುವ ಬಗ್ಗೆ ಚರ್ಚೆ ಮಾಡಲಾಗುವುದು. ಈ ಹಿಂದೆಯೂ ಈ ಪ್ರಸ್ತಾಪ ಇತ್ತು. ಆದರೆ, ಯಾವುದೇ ಕ್ರಮ ಆಗಿಲ್ಲ' ಎಂದರು.

'ಹಾಗೆಂದು, ಐಟಿ-ಬಿಟಿ ಕಂಪನಿಗಳು ಒಳ್ಳೆಯ ಕೆಲಸ ಮಾಡುತ್ತಿಲ್ಲ ಎಂದರ್ಥವಲ್ಲ. ಕಂಪನಿಗಳಿಗೆ ತೊಂದರೆ ನೀಡುವ ಉದ್ದೇಶವೂ ಇಲ್ಲ. ಕಂಪನಿಯ ನೌಕರರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಕಂಪನಿಗಳ ಮುಖ್ಯಸ್ಥರನ್ನು ಕರೆಸಿ ಮಾತುಕತೆ ನಡೆಸಲು ತೀರ್ಮಾನಿಸಲಾಗಿದೆ' ಎಂದೂ ಹೇಳಿದರು.


**ಕನಿಷ್ಠ ವೇತನ ಚರ್ಚೆ:** ಕುಶಲ ಹಾಗೂ ಕೌಶಲರಹಿತ ಕಾರ್ಮಿಕರಿಗೆ ನ್ಯಾಯಾಲಯದ ಮಾರ್ಗಸೂಚಿ ಪ್ರಕಾರ ಕನಿಷ್ಠ ವೇತನ ನಿಗದಿಪಡಿಸುವ ಕುರಿತು ಕೈಗಾರಿಕಾ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳ ಜತೆ ಸಚಿವ ಲಾಡ್ ಸಭೆ ನಡೆಸಿದರು.

ಎಫ್‌ಕೆಸಿಸಿಐ, ಸಿಐಐ ಹಾಗೂ ಕಾಸಿಯಾದ ಪದಾಧಿಕಾರಿಗಳ ಜತೆ ಸಭೆ ನಡೆಸಿದ ಲಾಡ್, ಕನಿಷ್ಠ ವೇತನ ನಿಗದಿ ಮಾಡಲು ಇರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಅದಾದ ಬಳಿಕ, ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಇಂಟಕ್, ಸಿಐಟಿಯು, ಟಿಯುಸಿಸಿ, ಎಚ್‌ಎಂಕೆಪಿ, ಗಾರ್ಮೆಂಟ್ಸ್ ನೌಕರರ ಸಂಘಟನೆಗಳ ಪದಾಧಿಕಾರಿಗಳ ಜತೆ ಚರ್ಚಿಸಿ, ಅವರ ಬೇಡಿಕೆಗಳನ್ನು ಸ್ವೀಕರಿಸಿದರು.

# ಇನ್ಫೋಸಿಸ್‌ಗೆ 1.5 ಶತಕೋಟಿ ಡಾಲರ್ ಎಐ ಗುತ್ತಿಗೆ ನಷ್ಟ

ನವದೆಹಲಿ: ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದಿಗ್ಗಜ ಕಂಪನಿಗಳಲ್ಲಿ ಒಂದಾದ ಇನ್ಫೋಸಿಸ್, 1.5 ಶತಕೋಟಿ




ಡಾಲರ್ ಮೊತ್ತದ ಕೃತಕ ಬುದ್ಧಿಮತ್ತೆಯ (ಎಐ) ಜಾಗತಿಕ ಗುತ್ತಿಗೆಯೊಂದನ್ನು ಕಳೆದು ಕೊಂಡಿದೆ. ಹೆಸರನ್ನು ಬಹಿರಂಗಪಡಿಸದ ಜಾಗತಿಕ ಕಂಪನಿ ಎಐ ಪರಿಹಾರಗಳನ್ನು ಕೇಂದ್ರೀಕರಿಸಿದ ಒಪ್ಪಂದ ವೊಂದಕ್ಕೆ ಸಹಿ ಹಾಕಿತ್ತು. 15 ವರ್ಷಗಳ ಅವಧಿಯ ಆ ಒಡಂಬಡಿಕೆಯನ್ನು ರದ್ದು ಮಾಡಿರುವುದು ಇನ್ಫೋಸಿಸ್‌ಗೆ ದೊಡ್ಡ ಹೊಡೆತವಾಗಿದೆ. ಇದೇ ಸೆಪ್ಟೆಂಬರ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಇನ್ಫೋಸಿಸ್‌ನ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ನಿರಂಜನ್ ರಾಯ್ ಹಠಾತ್ತನೆ ರಾಜೀನಾಮೆ ನೀಡಿದ ಎರಡು ವಾರಕ್ಕಿಂತ ಕಡಿಮೆ ಅವಧಿಯಲ್ಲಿ ಈ ವಿದ್ಯಮಾನ ನಡೆದಿದೆ.

ಧಾರವಾಡ ಕೃಷಿ ವಿವಿ ವಿಶ್ರಾಂತ ಉಪಕುಲಪತಿ ಪ್ರೊ.ಎಸ್.ಎ.ಪಾಟೀಲ್ ಅಭಿಪ್ರಾಯ

# ಆಧುನಿಕ ಕೃಷಿ ಪದ್ಧತಿಯಿಂದ ರೈತರಿಗೆ ಆದಾಯ

■ **ವಿಕ ಸುದ್ದಿಲೋಕ** ಕಲಬುರಗಿ

ರೈತರು ಆಧುನಿಕ ಕೃಷಿ ಪದ್ಧತಿಯೊಂದಿಗೆ ಹೊಸ ತಂತ್ರಜ್ಞಾನ ಅಳವಡಿಸಿಕೊಂಡರೆ ರೈತರ ಆದಾಯ ದ್ವಿಗುಣಗೊಳ್ಳಲಿದೆ ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಹಾಗೂ ಖ್ಯಾತ ಕೃಷಿ ತಜ್ಞ ಪ್ರೊ.ಎಸ್.ಎ.ಪಾಟೀಲ್ ಅಭಿಪ್ರಾಯಪಟ್ಟರು.

ತಾಲೂಕು ಮತ್ತು ಜಿಲ್ಲಾ ಕೃಷಿಕ ಸಮಾಜ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಜಂಟಿಯಾಗಿ ತಾಡತೆಗನೂರಿನ ಚಿತ್ರಶೇಖರ್ ಪರಸಪ್ಪಗೋಳ ತೋಟದಲ್ಲಿ ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆಧುನಿಕ ಕೃಷಿ ಪದ್ಧತಿಯಿಂದ ಇಸ್ರೇಲ್ ಸೇರಿ ನೀರಿನ ಕೊರತೆ ಇರುವ ರಾಷ್ಟ್ರಗಳು ಜಗತ್ತಿನಲ್ಲಿ ಯಶಸ್ವಿಯಾಗಿ ಕೃಷಿ ಕ್ಷೇತ್ರದಲ್ಲಿ ಮುನ್ನಡೆಯುತ್ತಿವೆ. ನಮ್ಮ ಫಲವತ್ತಾದ ಭೂಮಿಗಳಲ್ಲಿ ಅಂತಹ ಪದ್ಧತಿ ಅಳವಡಿಸಿಕೊಂಡರೆ ಇನ್ನೂ ಹೆಚ್ಚಿನ ಆದಾಯಗಳಿಸಿ ರಾಷ್ಟ್ರ ಅಭಿವೃದ್ಧಿಪಥದೆಡೆಗೆ ತೆಗೆದುಕೊಂಡು ಹೋಗಲು ರೈತರಿಂದ ಸಾಧ್ಯ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಹಾಗೂ ರೈತ ಪ್ರೊ.ಯಶವಂತರಾಯ ಅಷ್ಠಗಿ ಕೃಷಿ ಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಸಮಗ್ರ ಕೃಷಿ ಪದ್ಧತಿ ಹಾಗೂ ಮಿಶ್ರ ಕೃಷಿ ಪದ್ಧತಿಯಿಂದ ಮತ್ತು ತೋಟಗಾರಿಕೆಯಿಂದ ಹೆಚ್ಚಿನ ಲಾಭ ಪಡೆಯಲು ಸಾಧ್ಯವಾಗುತ್ತದೆ. ಯುವಕರು ಸ್ವಾವಲಂಬಿಗಳಾಗಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಗಣನೀಯ ಸಾಧನೆ ಮಾಡಲು ಇದು ಪ್ರೇರಣೆ ನೀಡಲಿದೆ ಎಂದರು.

ಕೃಷಿಕ ಸಮಾಜದ ಜಿಲ್ಲಾ ಖಜಾಂಚಿ ಶರಣಪ್ಪ ತಳವಾರ, ನಿರ್ದೇಶಕರಾದ ರಾಘವೇಂದ್ರ ಕುಲಕರ್ಣಿ ಮಾತನಾಡಿದರು. ಮಲ್ಲಯ್ಯ ಮುತ್ಯಾ ತಾಡತೆಗನೂರ ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಡಾ.ಸಿದ್ರಾಮಪ್ಪ ಧಂಗಾಪುರ, ನಿರ್ದೇಶಕ ಶ್ಯಾಮ್ ನಾಟಿಕರ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಸಮದ್ ಪಟೇಲ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಸಂತೋಷ್ ಸಜ್ಜನ್, ಕೃಷಿ ವಿಜ್ಞಾನಿ ವಾಸುದೇವ ನಾಯಕ್, ಸೋಮಶೇಖರ ಬಿರಾದಾರ, ರಾಜಕುಮಾರ ಕೋಟೆ, ತಾಳೆ ಬೆಳೆಗಾರರ ಸಂಘದ ಅಧ್ಯಕ್ಷ ಉತ್ತಮ್ ಕುಮಾರ ಪಾಟೀಲ್ ಬೆಳಕೋಟಾ, ರೈತ ರವೀಂದ್ರಕುಮಾರ ಭಂಟನಳ್ಳಿ, ಪಂಪಾಪತಿ ಪಾಟೀಲ್, ಜೀನೇಶ್ ಜ್ಯೋತಿ, ಶಾಂತಲಿಂಗ ಪಾಟೀಲ್ ಕೋಳಕೂರ, ಶಾಂತವೀರ ಪಾಟೀಲ್, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಸೇರಿ ಜಿಲ್ಲೆಯ ಅನೇಕ ಪ್ರಗತಿಪರ ರೈತರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ತಾಳೆ ಬೆಳೆ ಕುರಿತು ವಿಚಾರ ಸಂಕಿರಣ ನಡೆಯಿತು. ಕಲಬುರಗಿ ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರಾದ ಚಂದ್ರಕಾಂತ್ ಜೀವಣಗಿ ನಿರೂಪಿಸಿದರು. ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಚಿತ್ರಶೇಖರ ಪರಸಪ್ಪಗೋಳ ಸ್ವಾಗತಿಸಿದರು. ಕೃಷಿ ಅಧಿಕಾರಿ ಪ್ರಿಯಾಂಕಾ ಕುಲಕರ್ಣಿ ವಂದಿಸಿದರು.




**ಜಿಲ್ಲಾ ಕೃಷಿಕ ಸಮಾಜ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಜಂಟಿಯಾಗಿ ತಾಡತೆಗನೂರಿನ ಚಿತ್ರಶೇಖರ್ ಪರಸಪ್ಪಗೋಳ ತೋಟದಲ್ಲಿ ಆಯೋಜಿಸಿದ್ದ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ ಪ್ರಗತಿಪರ ರೈತರಿಗೆ ಕೃಷಿ ಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಿದ್ರಾಮಪ್ಪ ಧಂಗಾಪುರ, ಸಮದ್ ಪಟೇಲ್, ಸಂತೋಷ ಸಜ್ಜನ, ಚಂದ್ರಕಾಂತ್ ಜೀವಣಗಿ ಇತರರಿದ್ದರು.**

### ಕೃಷಿ ಶ್ರೀ ಪ್ರಶಸ್ತಿ ಪ್ರದಾನ

**ಇದೇ ಸಂದರ್ಭದಲ್ಲಿ ಜಿಡಲ್ಲೆಯ ಪ್ರಗತಿಪರ ರೈತರಿಗೆ ಕೃಷಿ ಶ್ರೀ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಶೋಭಾ ಸಂಗಣ್ಣ ಡಂಬಳ, ಪ್ರೊ.ಯಶವಂತರಾಯ ಅಷ್ಠಗಿ, ಸರುಬಾಯಿ ಕುಸುನೂರ, ಹಣಮಂತ ರೆಡ್ಡಿ, ಶಿವಕುಮಾರ ಸಜ್ಜನ, ಪಾಂಡುರಂಗ ಮಸ್ತಾನಪ್ಪ, ಶಾಂತಮಲ್ಲ ಅಗ್ನಾರಾಯ, ಮಲ್ಲಿಕಾರ್ಜುನ ಕಿರಣಗಿ, ನಾಗರಾಜ್ ಸೂರ್ಯಕಾಂತ, ಲಕ್ಷ್ಮಿಬಾಯಿ ಶರಣಬಸಪ್ಪ, ಶಿವರಾಯ ಹಿಪ್ಪರಗಿ, ಭೀಮಶ್ಯಾ ನೀರ್, ಗಂಗಮ್ಮ ಶಿವನಂದಯ್ಯ, ಆನಂದ ಬೆಳಗುಂಪಿ, ಕಲಾವತಿ ರಾಠೋಡ, ಶೀಲಾ ರಮೇಶ ತಿಪ್ಪನೂರ್ ಸೇರಿ ಒಟ್ಟು 17 ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.**

---

ನಗರದ ದೊಡ್ಡಪ್ಪ ಅಪ್ಪ ಪಿಯು ಕಾಲೇಜಿನಲ್ಲಿ ರೈತ ದಿನಾಚರಣೆ

## ರೈತರಾಗಿ, ದೇವರಾದ ಶರಣಬಸವೇಶ್ವರರು

■ **ವಿಕ ಸುದ್ದಿಲೋಕ** ಕಲಬುರಗಿ

ಶರಣಬಸವೇಶ್ವರರು ರೈತರಾಗಿದ್ದು ದೇವರಾದರು. ಸಮಾಜದಲ್ಲಿ ಎಲ್ಲರಿಗಿಂತಲೂ ರೈತರಿಗೆ ಅತಿ ಹೆಚ್ಚು ಗೌರವ ಸಲ್ಲಬೇಕು. ರೈತ ಈ ದೇಶದ ಬೆನ್ನೆಲುಬಾಗಿದ್ದಾನೆ ಅನ್ನದಾತನಾಗಿದ್ದಾನೆ ಎಂದು ಸಾವಯುವ ಕೃಷಿಕ ಹಣಮಂತಪ್ಪ ಬೆಳಗುಂಪಿ ಹೇಳಿದರು.

ನಗರದ ದೊಡ್ಡಪ್ಪ ಅಪ್ಪ ವಸತಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ರೈತ ದಿನಾಚರಣೆಯಲ್ಲಿ ಮಾತನಾಡಿದರು. ರೈತರು ಉತ್ಪಾದನೆ ಹೆಚ್ಚಿಸಲು, ಹೆಚ್ಚು ಲಾಭ ಪಡೆಯಲು ಉಣ್ಣುವ ಅನ್ನ ಬೆಳೆಯಲು ರಾಸಾಯನಿಕಗಳನ್ನು ಬಳಸುವುದು ಒಳ್ಳೆಯದಲ್ಲ, ರೈತರು ವಿಷಮುಕ್ತವಾದ ಸಾವಯುವ ಗೊಬ್ಬರದಿಂದ ತಯಾರಿಸಿದ ಧಾನ್ಯಗಳನ್ನು ಬೆಳೆಯುವ ಅವಶ್ಯಕತೆ ಇದೆ ವಿಷಯುಕ್ತ ಆಹಾರದಿಂದ ಜನರಿಗೆ ಸಾಕಷ್ಟು ರೋಗಗಳು ಬರುತ್ತವೆ ಎಂದು ಹೇಳಿದರು.

ಹಿಂದಿನ ಕಾಲದಲ್ಲಿ ಆಹಾರ ಧಾನ್ಯವನ್ನು ಆಡಕೀಲು ಗಡಗಿಗಳಲ್ಲಿ ಇಡುತ್ತಿದ್ದರು. ಇದರಿಂದ ಧಾನ್ಯ ಹಾಳಾಗುತ್ತಿರಲಿಲ್ಲ, ತಾಮ್ರದ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು. ತಾಮ್ರದ ಕೊಡದಲ್ಲಿಯ ನೀರು ಕುಡಿಯುತ್ತಿದ್ದರು. ಇದರಿಂದ ರೋಗ ಬರುತ್ತಿರಲಿಲ್ಲ ಎಂದು ಹೇಳಿದರು. ರೈತ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಪ್ರಾಚಾರ್ಯರಾದ ವಿನೋದ ಕುಮಾರ ಎಲ್ ಪತಂಗೆ ಅಧ್ಯಕ್ಷತೆವಹಿಸಿ ಮಾತನಾಡಿದರು. ಡಾ.ಆನಂದ ಸಿದ್ದಾಮಣಿ ಸೇರಿ ಸಿಬ್ಬಂದಿ ಇದ್ದರು.



**ನಗರದ ದೊಡ್ಡಪ್ಪ ಅಪ್ಪ ವಸತಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ರೈತ ದಿನಾಚರಣೆಯಲ್ಲಿ ಸಾವಯುವ ಕೃಷಿಕ ಹಣಮಂತಪ್ಪ ಬೆಳಗುಂಪಿ ಅವರನ್ನು ಸನ್ಮಾನಿಸ ಲಾಯಿತು.**



**ಶರಣಬಸವ ವಿಶ್ವವಿದ್ಯಾಲಯದ ವ್ಯವಹಾರ ಅಧ್ಯಯನ ನಿಕಾಯದಿಂದ 'ರೈತನ ಕೆಲಸ ಗಂಟೆಗಳ ಲೆಕ್ಕದಲ್ಲಿ ಅಲ್ಲ, ಎಕರೆಗಳ ಲೆಕ್ಕದಲ್ಲಿ' ಎಂಬ ಶೀರ್ಷಿಕೆಯೊಂದಿಗೆ ದೊಡ್ಡಪ್ಪ ಅಪ್ಪ ಸಭಾ ಮಂಟಪದಲ್ಲಿ ಶನಿವಾರ 'ರಾಷ್ಟ್ರೀಯ ರೈತ ದಿನ ಆಚರಿಸಲಾಯಿತು. ಕೊಪ್ಪಳದ ಅಯೋಧ್ಯ ಕ್ರಾಫ್ಟ್ ಅಕಾಡೆಮಿ ಸಂಸ್ಥಾಪಕ ಡಾ.ಎಂ.ಬಿ.ಪಾಟೀಲ್, ಕುಲಸಚಿವರಾದ ಡಾ.ಅನಿಲಕುಮಾರ ಬಿಡವೆ, ಡೀನ್ ಡಾ.ಲಕ್ಷ್ಮಿ ಪಾಟೀಲ್ ಮಾಕಾ, ವ್ಯವಹಾರ ಅಧ್ಯಯನ ನಿಕಾಯದ ಡೀನ್ ಡಾ.ಎಸ್.ಎಚ್.ಹೊನ್ನಳ್ಳಿ ಇತರರಿದ್ದರು.**

# ಜೇನು ಕೃಷಿಯಿಂದ ರೈತರ ಆರ್ಥಿಕ ವೃದ್ಧಿ: ಹೆಗಡೆ

**ಆಳಂದ:** ಸಾಂಪ್ರದಾಯಿಕ ಬೇಸಾಯದ ಜತೆಗೆ ಜೇನು ಕೃಷಿ ಮೈಗೂಡಿಸಿಕೊಂಡರೆ ಆರ್ಥಿಕ ವೃದ್ಧಿಯೂ ಸಾಧ್ಯವಾಗುತ್ತದೆ ಎಂದು ಉತ್ತರಕನ್ನಡ ಜಿಲ್ಲೆಯ ಶಿರಸಿಯ ಜೇನು ಕೃಷಿಕ ಮಧುಕೇಶ್ವರ ಹೆಗಡೆ ಹೇಳಿದರು.

ತಾಲೂಕಿನ ತಡಕಲ್ ಗ್ರಾಮದಲ್ಲಿ ಸ್ವಾತಂತ್ರ್ಯ ಸೇನಾನಿ, ಶತಾಯುಷಿ, ಪ್ರಗತಿಪರ ಕೃಷಿಕರಾಗಿದ್ದ ದಿ।ರುಕ್ಮಯ್ಯ ಸಾಬಯ್ಯ ಗುತ್ತೇದಾರ ಅವರ 11ನೇ ಪುಣ್ಯಸ್ಮರಣೆ ಅಂಗವಾಗಿ ರಾಷ್ಟ್ರೀಯ ರೈತ ದಿನಾಚರಣೆ, ಧಾರ್ಮಿಕ ಸಮಾರಂಭ, ಕೃಷಿ ಸಾಧಕರಿಗೆ ಆಳಂದ 'ಕೃಷಿ ಸಿರಿ' ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭದಲ್ಲಿ ತಮಗೆ ನೀಡಿದ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಜೇನು ಕೃಷಿಯಲ್ಲಿ ಆದಾಯ ಗಳಿಸುವುದರ ಜತೆಗೆ ನಾವು ಜನರಿಗೆ ಉದ್ಯೋಗವನ್ನು ಸೃಷ್ಟಿಸಬಹುದು. ಈ ಕೃಷಿಯಲ್ಲಿ ನಾನು ವಾರ್ಷಿಕವಾಗಿ 2.28ಕೋಟಿ ರೂ. ವರೆಗೂ ವ್ಯವಹಾರ ಮಾಡುತ್ತಿದ್ದೇನೆ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಹಾರಕೂಡ ಮಠದ ಡಾ।ಚೆನ್ನವೀರ ಶಿವಾಚಾರ್ಯರು ಸಮಾರಂಭ ಉದ್ಘಾಟಿಸಿ ಮಾತನಾಡಿ, ಬಡವ ದೀನ ದುರ್ಬಲರ, ಗುರು ಹಿರಿಯರ ಸೇವೆಯಲ್ಲಿ ತೊಡು ವವನೇ ನಿಜವಾದ ಮಾಲೀಕನಾಗಿದ್ದು, ಇಂಥ ಸಮಾಜಮುಖಿ ಕಾರ್ಯವನ್ನು ಮಾಜಿ ಶಾಸಕ ಸುಭಾಷ ಗುತ್ತೇದಾರ ತಮ್ಮ ತಂದೆಯ ಸ್ಮರಣಾರ್ಥವಾಗಿ ಪ್ರತಿವರ್ಷ ನಡೆಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ನಂದಗಾಂವ ಮಠದ ಶ್ರೀ ರಾಜಶೇಖರ ಮಹಾ ಸ್ವಾಮೀಜಿ ಸಾನ್ನಿಧ್ಯ, ಕಡಗಂಚಿಯ ವೀರಭದ್ರ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.



ಆಳಂದ: ತಡಕಲ್ ಗ್ರಾಮದಲ್ಲಿ ಸ್ವಾತಂತ್ರ್ಯ ಸೇನಾನಿ ರುಕ್ಮಯ್ಯಾ ಗುತ್ತೇದಾರ ಪುಣ್ಯ ಸ್ಮರಣೆ ಅಂಗವಾಗಿ ನಡೆದ ರೈತ ದಿನಾಚರಣೆಯಲ್ಲಿ ಸಾಧಕ ಕೃಷಿಕರಿಗೆ 'ಆಳಂದ ಕೃಷಿ ಸಿರಿ' ಪ್ರಶಸ್ತಿಯನ್ನು ಮಾಜಿ ಶಾಸಕ ಸುಭಾಷ ಗುತ್ತೇದಾರ ಪ್ರದಾನ ಮಾಡಿದರು. ಮಠಾಧೀಶರು, ಮುಖಂಡರು ಇದ್ದರು.

## ಸಾಧಕರಿಗೆ 'ಕೃಷಿ ಸಿರಿ' ಪ್ರಶಸ್ತಿ ಪ್ರದಾನ

ನರ್ಸರಿ ಮತ್ತು ಕೃಷಿಯಲ್ಲಿ ಧಂಗಾಪುರದ ನಾಗರಾಜ ಶೇಗಜಿ ಮತ್ತು ಹೈನುಗಾರಿಕೆ, ಕೃಷಿಯಲ್ಲಿ ಗುರುಬಾಯಿ ಎಂ. ಆಳಂದ, ತೀರ್ಥ ಸಾಧಕ ದೇವಿಂದ್ರಪ್ಪ ಅಂಧಪ್ಪಾ ಹಳ್ಳಿ, ಮಲ್ಲಿನಾಥ ಸಾಯಬಣ್ಣಾ ಯಳಸಂಗಿ, ಬಸಣ್ಣಪ್ಪ ಸಿರೂರ, ಬೋಳಣಿಯ ಬಂಡಪ್ಪ ಬಿ. ಸಂಗೋಳಗಿ, ಯಳಸಂಗಿಯ ಬುದ್ಧಪ್ಪ ಸಿದ್ಧಪ್ಪ ಕುಮಸಗಿ, ಖಜೂರಿಯ ಬಸವರಾಜ ಕಲ್ಯಾಣಪ್ಪ ನಗರೆ, ಶಿವರಾಜ ಶ್ರೀಮಂತರಾಯ ಕುಂಬಾರ ಸುಂಟನೂರ, ಮಾದನಹಿಪ್ಪರಗಾದ ಶಿವಲಿಂಗಪ್ಪ ಬಸವರಾಜ ಹುಡಗಿ, ಆಲೂರದ ಸುಭಾಷ ಅಂಬಾರಾಯ ಹಂಗರಗಿ ಅವರಿಗೆ ಮಾಜಿ ಶಾಸಕ ಸುಭಾಷ ಗುತ್ತೇದಾರ ಪ್ರಶಸ್ತಿ ಪ್ರದಾನ ಮಾಡಿದರು.

ಮಾಡಿಯಾಳದ ಒಪ್ಪತ್ತೇಶ್ವರ ಸ್ವಾಮೀಜಿ, ಮಾದನಹಿಪ್ಪರ್ಗಾದ ಅಭಿನವ ಶ್ರೀ ಶಿವಲಿಂಗ ಸ್ವಾಮೀಜಿ, ಶ್ರೀ ಶಾಂತವೀರ ಶಿವಾಚಾರ್ಯರು, ಚಿಣಮಗೇರಿಯ ಶ್ರೀ ವೀರಮಹಾಂತ ಶಿವಾಚಾರ್ಯರು, ಕೇಸರ ಜವಳಗಾದ ಶ್ರೀ ವೀರಂತೇಶ್ವರ ಶಿವಾಚಾರ್ಯರು, ಬಂಗರಗಾದ ಶ್ರೀ ಗುರುಲಿಂಗ ಶಿವಾಚಾರ್ಯರು, ಕಿಣ್ಣಿಸುಲ್ತಾನದ ಶ್ರೀ ಶಿವಶಾಂತಲಿಂಗ ಶಿವಾಚಾರ್ಯರು, ತಡಕಲ್‌ನ ಶ್ರೀ ಸಿದ್ಧಮಲ್ಲ ಶಿವಾಚಾರ್ಯರು, ವಿಠ್ಠಲರಾವ್ ಪಾಟೀಲ, ವೀರಣ್ಣಾ ಮಂಗಾಣೆ, ಹರ್ಷಾನಂದ ಗುತ್ತೇದಾರ, ಸಂತೋಷ ಗುತ್ತೇದಾರ, ಅಶೋಕ ಗುತ್ತೇದಾರ, ಕುಪೇಂದ್ರ ಗುತ್ತೇದಾರ ಹಾಗೂ ಇನ್ನಿತರರು ಇದ್ದರು.

ಮಾಜಿ ಶಾಸಕ ಸುಭಾಷ ಗುತ್ತೇದಾರ ಪ್ರಾಸ್ತಾವಿಕ ಮಾತನಾಡಿದರು. ಕಸಾಪ ಅಧ್ಯಕ್ಷ ಹಣಮಂತ ಶೇರಿ ಖಜೂರಿ, ಸಾಹಿತಿ ಅಪ್ಪಾಸಾಬ ಗುಂಡೆ ನಿರೂಪಿಸಿದರು. ಶರಣಬಸಪ್ಪ ವಡಗಾಂವ ವಂದಿಸಿದರು.

ಶಿವರುದ್ರಯ್ಯ ಸ್ವಾಮಿ ಗೌಡಗಾಂವ, ಶಿವಶರಣಪ್ಪಾ ಪೂಜಾರಿ ಅವರಿಂದ ಸಂಗೀತ ಸೌರಭ ಮತ್ತು ವಿವಿಧ ಭಜನಾ ಮಂಡಳಿಗಳಿಂದ ಗಾಯನ ಕಾರ್ಯಕ್ರಮ ನಡೆಯಿತು.

**"20,000ರೂ.ಗಳಿಂದ ನಾನು ಜೇನು ಕೃಷಿ ವ್ಯವಹಾರ ಆರಂಭಿಸಿದ್ದು, ಇವತ್ತು 18ಕೋಟಿ ರೂ. ಆದಾಯ ಪಡೆಯುತ್ತಿದ್ದೇನೆ. ಬಡ ರೈತನ ಮಗನಾಗಿ 114ಜನರಿಗೆ ನಾನು ಇವತ್ತು ಕೆಲಸ ಕೊಡುತ್ತಿದ್ದೇನೆ. ಜೇನಿನಿಂದ ಕೇವಲ ಜೇನುತುಪ್ಪ ಪಡೆಯುವುದಷ್ಟೇ ಅಲ್ಲ, ಇನ್ನು ಅನೇಕ ಉತ್ಪನ್ನಗಳನ್ನು ತೆಗೆಯಬಹುದು. ಜೇನಿನ ಪರಾಗದಿಂದ ಸೋಪು ಸೇರಿದಂತೆ ವಿವಿಧ ಔಷಧ ಪದಾರ್ಥ ಪಡೆಯಬಹುದು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲೂ ಜೇನು ಕೃಷಿ ಮಾಡಬಹುದು. ಹೆಚ್ಚಾಗಿ ತೊಗರಿ ಬೆಳೆ ಇಲ್ಲಿ ಕಂಡುಬರುತ್ತದೆ. ಜೇನು ಜೇನು ಉತ್ಪಾದನೆಗೆ ಅವಕಾಶಗಳು ಸಾಕಷ್ಟಿವೆ. ಜೇನು ಸಾಕಾಣಿಕೆ ಮತ್ತು ಉಪ ಸಾಮಗ್ರಿ ತಯಾರಿಕೆಗೆ ಜೇನು ಪೆಟ್ಟಿಗೆಗಳ ಸಹಿತ ಬಂದು ತರಬೇತಿ ನೀಡಲು ಸಿದ್ಧನಾಗಿದ್ದೇನೆ.**

● **ಮಧುಕೇಶ್ವರ ಹೆಗಡೆ,** ಜೇನು ಕೃಷಿಕ, ಶಿರಸಿ


Sport

# A day of the young guns as Anmol proves too hot for Ashmita and Tanvi outlasts Isharani

The 16-year-old and 15-year-old will vie for the women's title; in the men's semifinal, Tharun passes the Bharat test and Chirag stuns Kiran

NATL. BADMINTON

K. Keerthivasan
GUWAHATI

The women's singles finalists are just 16 and 15 at the 85th senior National badminton championships here.

On Saturday, the 16-year-old Anmol Kharb of Haryana, the reigning under-17 girls' champion, showed confidence and maturity beyond her age to stun second seed Ashmita Chaliha of Petroleum 21-17, 21-19 while the 15-year-old Tanvi Sharma of Punjab overcame a spirited challenge from Assam's Isharani Baruah to win 21-15, 20-22, 21-14.

Telangana's M. Tharun, who faced his first big test, scripted a 21-11, 16-21, 21-19 victory over Bharat Raghav of Haryana in the men's singles semifinals.




**Prodigy:** The 16-year-old Anmol showed maturity beyond her age. RITU RAJ KONWAR

Tharun, seeded fourth, will face Chirag Sen of Indian Railways after the latter produced an outstanding display to get past second seed Kiran George of RBI 21-18, 21-18.

Bharat was subdued throughout the first game and only in the second period of the second half did he start attacking with vigour.

In the third, Tharun led 20-17 but received a yellow card for delaying things.

At 20-18, he protested a line call and hit a forehand long. Just when it looked like he would lose his cool, Tharun finished the contest with a forehand crosscourt winner.

Chirag made too many unforced errors in the first game as he took time to settle down.

He, however, found his rhythm when it mattered most and entered his maiden final.

**Exceptional effort**

It was an exceptional effort from Chirag to keep a player of Kiran's calibre quiet.

The former's smashes were mostly on target, rattling the latter.

In the women's semifinal, Anmol pushed Ashmita to all corners of the court. She was dictated most of the rallies from the back of the court and was also sharp at the net.

Ashmita made it worse for herself by committing too many unforced errors. Barring a few powerful crosscourt smashes, she couldn't do much and made an exit.

**The results (semifinals):**

**Men: Singles:** M. Tharun (TS) bt Bharat Raghav (Har) 21-11, 16-21, 21-19; Chirag Sen (Rlys) bt Kiran George (RBI) 21-18, 21-18.

**Doubles:** P. Vishnuvardhan Goud & G. Krishna Prasad (TS) bt Hariharan Amsakarunan & R. Ruban Kumar (TN) 21-16, 21-12; K. Pruthvi Roy & Suraj Goala (Asm) bt P. Naveen & V. Lokesh (TN) 21-12, 21-16.

**Women: Singles:** Anmol Kharb (Har) bt Ashmita Chaliha (Pet) 21-17, 21-19; Tanvi Sharma (Pun) bt Ishrani Baruah (Asm) 21-15, 20-22, 21-14.

**Doubles:** Ritika Thaker & Simran Singhi (Mah) bt P. Amrutha & Pranjal Prabhu Chimulkar (Kar) 21-11, 21-11; Priya Devi Konjenbgam & Sruti Mishra (UP) bt Mrunmayee Deshpande & Prerana Alvekar (Mah) 21-13, 21-11.

**Mixed doubles:** Dhruv Kapila (Pun) & Tanisha Crasto (Goa) bt Deep Rambhiya & Akshya Warang (Mah) 21-11, 21-13; Nitin Kumar & Navdha Manglam (Del) bt H. V. Nithin (Kar) & K. Maneesha (RBI) 10-21, 21-18, 21-19.

# FC Goa runs rampant, slots home four past hapless Mohun Bagan

ISL-10

Amitabha Das Sharma
KOLKATA

FC Goa produced a fine display of attacking football to outclass defending champion Mohun Bagan SG 4-1 in an ISL-10 fixture at the Salt Lake Stadium here on Saturday. The masterly performance saw Goa consolidate its position at the top of the table with 23 points from nine matches.

Bagan suffered its second successive loss to remain on 19 points from nine outings.

Goa took control of the proceedings quite early and found the breakthrough in the 10th minute as winger Noah Sadaoui netted a penalty. With suspensions and injuries taking away more quite a few of its regulars, Bagan couldn't contain the visitors.




**Early breakthrough:** Noah, right, scores from the spot to put FC Goa in front in the 10th minute. PTI

Goa doubled the lead in the 42nd minute when Victor Rodriguez played a 1-2 with Carl McHugh inside the Bagan box, creating the opportunity and finding the target too.

Bagan's defence faltered again, this time in added minutes, allowing Noah the space inside the box. The American made no mistake, scoring with an angular shot.

Down 0-3, the Kolkata giant tried desperately to make a comeback. Its effort bore fruit as it pulled one back before the breather through Dimitri Petratos' free-kick.

In the second half, Bagan struggled again while Goa added another goal.

Substitute Carlos Martinez found the target from the spot to cap a memorable night for Goa.

**The result:**

Mohun Bagan 1 (Petratos 45+7) lost to FC Goa 4 (Sadaoui 10-pen & 45+3, Rodriguez 42, Martinez 90+1-pen).

# Harmanpreet leads fightback, sets up an exciting final day

**In the final hour of the third day's play, when nothing seemed to be working, the India captain brings herself into the attack and scalps two quick wickets to break the visitors' momentum; Healy's Australia finishes at 233 for five, a slender lead of 46**

**AUSTRALIA IN INDIA**

**Shayan Acharya**
MUMBAI

Her arms outstretched like wings, Harmanpreet Kaur sprinted towards her teammates as a few hundred spectators chanted her name at the Wankhede Stadium on Saturday.

It was the final hour of third day's play and the Indian captain brought herself into the attack in the 72nd over as nothing seemed to be working for her bowlers with Tahlia McGrath (73, 177b, 10x4) and Alyssa Healy (32, 101b, 1x4) consolidating Australia's innings.

There was a huge appeal on the first delivery, but the DRS confirmed that the ball was sliding down leg, giving McGrath a sigh of relief. However, three balls later, the Australian No. 4's efforts to defend led to the ball rolling onto the stumps. With that, Harmanpreet (2 for 23) not only broke the 66-run partnership, but also brought India back into the game. Late strikes led to Australia ending the day at 233 for five in its second innings, with a slender lead of 46 runs in the one-off Test.

Harmanpreet bowled nine overs at a stretch, and in between, sparks flew with India appealing for obstructing the field when Healy shielded herself from a Harmanpreet throw. The umpires ruled in the Australian captain's favour, even though she missed a sweep and was trapped in front by her Indian counterpart shortly after.

Those quick wickets broke the momentum for the touring team, which dominated the first two sessions.

Resuming on 376 for 7, India could add just 30 runs to its tally before being bundled out 35 minutes into the day. Though Pooja Vastrakar struck three fours early on, she fell three short of her maiden Test fifty as Australian bowlers Kim Garth and Annabel Sutherland executed the short-ball plan to perfection.

Deepti Sharma, too, failed to extend her stay and was cleaned up by Garth.

On a rather placid surface, Australian openers looked at ease before Richa Ghosh's direct throw found Beth Mooney well short of her crease, and soon, Phoebe Litchfield departed after misjudging the length of a Sneh Rana delivery.

Even though Australia looked in a spot of bother at 56 for 2, it turned things around in the second session and the Indian bowlers were made to toil.

McGrath joined forces with Ellyse Perry and batted for 25 overs and forged a crucial 84-run stand for the third wicket. Making the most of a couple of reprieves, the pair looked strong before Rana removed Perry.

However, McGrath continued her dogged batting display, went past yet another fifty and built a solid partnership with captain Healy. The duo seemed to be in no hurry and made the most of a few lifelines to solidify the innings. They looked set to extend the lead before Harmanpreet helped India fight back.



**Golden arm:** Harmanpreet broke Australia's resistance, sending back McGrath. EMMANUAL YOGINI

**SCOREBOARD**

**Australia — 1st innings:** 219 in 77.4 overs.

**India — 1st innings:** Shafali Varma lbw b Jonassen 40 *(59b, 8x4)*, Smriti Mandhana run out 74 *(106b, 12x4)*, Sneh Rana b Gardner 9 *(57b, 1x4)*, Richa Ghosh c Gardner b Garth 52 *(104b, 7x4)*, Jemimah Rodrigues c Sutherland b Gardner 73 *(121b, 9x4)*, Harmanpreet Kaur lbw b Gardner 0 *(2b)*, Yastika Bhatia lbw b Gardner 1 *(7b)*, Deepti Sharma b Garth 78 *(171b, 9x4)*, Pooja Vastrakar c Garth b Sutherland 47 *(126b, 7x4)*, Renuka Singh c Gardner b Sutherland 8 *(9b, 2x4)*, Rajeshwari Gayakwad (not out) 0 *(1b)*; Extras (b-15, lb-5, nb-4): 24; Total (in 126.3 overs): 406.

**Fall of wickets:** 1-90 (Shafali, 16.4 overs), 2-140 (Sneh, 34.5), 3-147 (Smriti, 38.4), 4-260 (Richa, 69.5), 5-261 (Harmanpreet, 70.2), 6-265 (Yastika, 72.3), 7-274 (Jemimah, 78.4), 8-396 (Pooja, 122.6), 9-402 (Deepti, 125.5).

**Australia bowling:** Cheatle 9-3-23-0, Garth 14-2-58-2, Perry 4-0-31-0, Gardner 41-7-100-4, Jonassen 18-4-42-1, Sutherland 11.3-2-41-2, King 19-1-69-0, McGrath 10-2-22-0.

**Australia — 2nd innings:** Beth Mooney run out 33 *(37b, 7x4)*, Phoebe Litchfield b Sneh 18 *(44b, 2x4)*, Ellyse Perry c Yastika b Sneh 45 *(91b, 5x4)*, Tahlia McGrath b Harmanpreet 73 *(177b, 10x4)*, Alyssa Healy lbw b Harmanpreet 32 *(101b, 1x4)*, Annabel Sutherland (batting) 12 *(67b, 1x4)*, Ashleigh Gardner (batting) 7 *(23b, 1x4)*; Extras (b-10, lb-3): 13; Total (for five wkts. in 90 overs): 233.

**Fall of wickets:** 1-49 (Mooney, 11.5), 2-56 (Litchfield, 13.5), 3-140 (Perry, 42.4), 4-206 (McGrath, 71.5), 5-221 (Healy, 79.4).

**India bowling:** Renuka 8-3-22-0, Pooja 8-0-36-0, Sneh 17-3-54-2, Deepti 19-5-30-0, Rajeshwari 27-10-42-0, Jemimah 2-0-13-0, Harmanpreet 9-0-23-2.

# Dhoni to resume training in the next few weeks: CSK CEO

The former India skipper underwent surgery on his left knee after leading Super Kings to a fifth title in the 2023 edition; Viswanathan feels the franchise pretty much got all players it targeted

IPL

S. Dipak Ragav
CHENNAI




**I am back!** Dhoni will start working in the nets soon. FILE PHOTO: K. MURALI KUMAR

Chennai Super Kings skipper M.S. Dhoni is set to resume training in the next few weeks as part of his preparation for the 2024 IPL, according to the franchise's CEO, K.S. Viswanathan.

The former India skipper underwent surgery on his left knee after leading the Super Kings to a fifth IPL title earlier this year. The 42-year-old was often seen sporting knee strapping during the 2023 edition and struggled a bit, especially while running between the wickets.

Giving an update about Dhoni's fitness, Viswanathan said, "He is doing well now. He has started his rehab and is working in the gym. And, probably in another 10 days, he will also start working in the nets."

"With the season set to start around March 22, we are planning for a camp in Chennai by the first week of March," the CEO added at the sidelines of the launch of the Junior Super Kings inter-school tournament on Saturday.

Earlier this week, the player auction for the 2024 season was held in Dubai, and the Super Kings added six players to their roster as they prepare to defend their title.

When asked whether the team got its preferred picks at the auction, Viswanathan said, "We pretty much got all our targets. We were planning for Daryl Mitchell. We thought Mustafizur Rahman would be a good bet at our Chepauk wicket, with the big side boundaries.

"These were our thoughts, but we were not sure whether we would be able to get them. Luckily, it was a good auction for us this time."

On the decision to spend ₹8.4 crore for uncapped batter Sameer Rizvi, Viswanathan said, "Sameer Rizvi was a targeted player for many of the franchises. We were probably a bit lucky in getting him. If you look at it, we were trying to get a replacement for Ambati Rayudu. We didn't have enough players with that kind of experience to bid for any of them. So, we thought it was better to go in for a youngster who has the promise."

**For the future**

"I am not saying this just because we have picked him, he will be the next best. But the opportunity is there for that. Last year, we got Shaik Rasheed, Nishant Sindhu and Rajvardhan Hangargekar. So, we are also trying to build the team for the future, which will help us in the longer run," he explained.


### ಡೇವಿಸ್ ಕಪ್ ಪಂದ್ಯ ಆಡಲು ಪಾಕಿಸ್ತಾನಕ್ಕೆ ಹೋಗಬೇಕಾಗಿದೆ ಭಾರತ ಟೆನಿಸ್ ತಂಡ

# ಎಐಟಿಎ ಮನವಿ ತಿರಸ್ಕರಿಸಿದ ಐಟಿಎಫ್

**ನವದೆಹಲಿ (ಪಿಟಿಐ):** ಇಸ್ಲಾಮಾಬಾದ್‌ನಲ್ಲಿ ಡೇವಿಸ್ ಕಪ್ ವಿಶ್ವಗುಂಪಿನ ಪಂದ್ಯವಾಡಲು ಭಾರತ ತಂಡಕ್ಕೆ ಭದ್ರತೆಯ ಸಮಸ್ಯೆ ಎದುರಾಗಬಹುದು ಎಂಬ ಅಖಿಲ ಭಾರತ ಟೆನಿಸ್ ಸಂಸ್ಥೆಯ ಮನವಿಯನ್ನು ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ (ಐಟಿಎಫ್) ಟ್ರಿಬ್ಯೂನಲ್ ತಿರಸ್ಕರಿಸಿದೆ. ಹೀಗಾಗಿ 60 ವರ್ಷಗಳಲ್ಲಿ ಮೊದಲ ಬಾರಿ ಭಾರತ ಟೆನಿಸ್ ತಂಡ ಪಾಕಿಸ್ತಾನಕ್ಕೆ ಭೇಟಿ ನೀಡಲೇಬೇಕಾಗಿದೆ.

ಭಾರತ ತಂಡ ಒಂದು ವೇಳೆ ಪಾಕಿಸ್ತಾನಕ್ಕೆ ಆಡಲು ಹೋಗದಿದ್ದರೆ, ಪಂದ್ಯದಲ್ಲಿ ಆತಿಥೇಯ (ಪಾಕಿಸ್ತಾನ) ತಂಡವನ್ನು ವಿಜಯಿ ಎಂದು ತೀರ್ಮಾನಿಸಲಾಗುತ್ತದೆ. ಈ ತೀರ್ಮಾನವಾದಲ್ಲಿ ಭಾರತ ವಿಶ್ವಗುಂಪು ಎರಡಕ್ಕೆ ಸರಿಯಲಿದೆ. ಗೆಲ್ಲುವ ತಂಡ ವಿಶ್ವ ಗುಂಪು ಒಂದರಲ್ಲಿ ಮುಂದುವರಿಯಲಿದೆ.

ಭಾರತ ಡೇವಿಸ್ ಕಪ್ ತಂಡ 1964 ರಲ್ಲಿ ಕೊನೆಯ ಬಾರಿ ಪಾಕಿಸ್ತಾನಕ್ಕೆ ತೆರಳಿತ್ತು. ಆಗ ಭಾರತ 4-0 ಅಂತರದಿಂದ ಜಯಗಳಿಸಿತ್ತು.



ರಾಮಕುಮಾರ್ ರಾಮನಾಥನ್

ತಮ್ಮ ಮನವಿಯನ್ನು ಐಟಿಎಫ್ ತಿರಸ್ಕರಿಸಿರುವುದನ್ನು ಎಐಟಿಎ ಮಹಾ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ಪಿಟಿಐಗೆ ಖಚಿತಪಡಿಸಿದ್ದಾರೆ.

‘ಐಟಿಎಫ್ ಟ್ರಿಬ್ಯೂನಲ್‌ನ ಸಂದೇಶ ತಲುಪಿದೆ. ನಾವು ಸೋಮವಾರ ಕ್ರೀಡಾ ಸಚಿವಾಲಯವನ್ನು ಸಂಪರ್ಕಿಸಲಿದ್ದು, ತಂಡವನ್ನು ಕಳುಹಿಸಬೇಕೇ ಎಂಬ ಬಗ್ಗೆ ಮಾರ್ಗದರ್ಶನ ಪಡೆಯುತ್ತೇವೆ’ ಎಂದು ಧುಪರ್ ಪಿಟಿಐಗೆ ತಿಳಿಸಿದರು. ಎಐಟಿಎ, ಫೆಬ್ರುವರಿ 3 ಮತ್ತು 4ರಂದು ನಡೆಯುವ ಈ ಪಂದ್ಯಕ್ಕೆ ಇತ್ತೀಚೆಗಷ್ಟೇ ಐವರು ಆಟಗಾರರ ತಂಡವನ್ನು ಪ್ರಕಟಿಸಿದ್ದು, ಐಟಿಎಫ್ ತಮ್ಮ ಮನವಿ ತಿರಸ್ಕರಿಸಿದರೆ ತಂಡವನ್ನು ಕಳುಹಿಸುವುದಾಗಿ ತಿಳಿಸಿತ್ತು.

ತಟಸ್ಥ ಸ್ಥಳದಲ್ಲಿ ಪಂದ್ಯವನ್ನು ನಡೆಸುವಂತೆ ಎಐಟಿಎ ವಿನಂತಿಯನ್ನು 15 ಸದಸ್ಯರ ಡೇವಿಸ್ ಕಪ್ ಸಮಿತಿ ತಳ್ಳಿಹಾಕಿತ್ತು. ಹೀಗಾಗಿ ಎಐಟಿಎ, ದಾರಿಕಾಣದೇ ಐಟಿಎಫ್ ಟ್ರಿಬ್ಯೂನಲ್‌ಅನ್ನು ಸಂಪರ್ಕಿಸಿತ್ತು.

‘ಪಾಕಿಸ್ತಾನ ಕೆಲವು ಮಹತ್ವದ ಡೇವಿಸ್ ಕಪ್ ಪಂದ್ಯಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಭಾರತ ವಿರುದ್ಧವೂ ಯೋಗ್ಯ ರೀತಿಯಲ್ಲಿ ಆ ದೇಶವು ಪಂದ್ಯ ಆಯೋಜಿಸಲಾಗದು ಎಂಬುದಕ್ಕೆ ಯಾವುದೇ ಸ್ಪಷ್ಟ ಆಧಾರವಿಲ್ಲ’ ಎಂದು ಸಮಿತಿ ಹೇಳಿದೆ. ಶಾಂತಿ- ಸುವ್ಯವಸ್ಥೆ ಕಾಪಾಡುವುದು ಆತಿಥೇಯ ದೇಶದ ಜವಾಬ್ದಾರಿ. ಪ್ರಯಾಣ ಮತ್ತು ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ಭಾರತ ತಂಡಕ್ಕೆ ಭರವಸೆ ನೀಡಬೇಕು’ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

ಪ್ರಕಟಿಸಲಾದ ತಂಡದಿಂದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಹಿಂದೆ ಸರಿದಿದ್ದಾರೆ. ರಾಮಕುಮಾರ್ ರಾಮನಾಥನ್, ಎನ್.ಶ್ರೀರಾಮ್ ಬಾಲಾಜಿ, ಯೂಕಿ ಭಾಂಬ್ರಿ, ನಿಕಿ ಪೂಣಚ್ಚ ಮತ್ತು ಸಾಕೇತ್ ಮೈನೇನಿ ತಂಡದಲ್ಲಿದ್ದಾರೆ. ಲಖನೌದಲ್ಲಿ ಮೊರೊಕೊ ವಿರುದ್ಧ ಡೇವಿಸ್ ಕಪ್‌ಗೆ ಪದಾರ್ಪಣೆ ಮಾಡಿದ್ದ ದಿಗ್ವಿಜಯ ಪ್ರತಾಪ್ ಸಿಂಗ್ ಅವರು ಮೀಸಲು ಆಟಗಾರನಾಗಿದ್ದಾರೆ.

CENTRAL UNIVERSITY OF KARNATAKA

**Any Feedback**

**Contact Us**

# Central Library

08477-226717

librarian@cuk.ac.in

http://cuklibrary.ac.in/index.html

**Central University of Karnataka, Kalaburagi-585367,India**